ಸಂಪುಟ : 8 ಸಂಚಿಕೆ : 197 ಪುಟ : 4 ಬೆಲೆ : 3.00 ಶನಿವಾರ ಸೆಪ್ಟೆಂಬರ್ 09, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 197 Pages : 4 Price : 3.00 Saturday September 09, 2023 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2023-25

### ಥರ್ಡ್-ಐ ಕಮಾಂಡ್, ಕಂಟ್ರೋಲ್ ಸೆಂಟರ್ ಉದ್ಘಾಟಿಸಿದ ಗೃಹ ಸಚಿವ ಜಿ ಪರಮೇಶ್ವರ್

# ಸ್ಮಾರ್ಟ್ ಪೊಲೀಸಿಂಗ್‌ನಿಂದ ಅಪರಾಧ ನಿಯಂತ್ರಣ



> ಗದಗ ಜಿಲ್ಲಾ ಕೇಂದ್ರದಲ್ಲಿ ಅಪರಾದಗಳ ತಡೆಗಾಗಿ ಆಧುನಿಕ ತಂತ್ರಜ್ಞಾನವನ್ನು ಪೊಲೀಸ್ ಇಲಾಖೆ ಅಳವಡಿಸಿಕೊಂಡು ಮುನ್ನಡೆಯುತ್ತಿರುವದು ಸಂತಸ ತಂದಿದೆ. ಮುಂದಿನ ಹತ್ತು ವರ್ಷಗಳ ಅವಧಿಯನ್ನು ಗಮನದಲ್ಲಿಟ್ಟುಕೊಂಡು ಈಗಾಗಲೇ ಗದಗ-ಬೆಟಗೇರಿ ನಗರದ ಪ್ರಮುಖ ರಸ್ತೆ ಹಾಗೂ ವೃತ್ತಗಳಲ್ಲಿ ಉತ್ತಮ ಗುಣಮಟ್ಟದ ಸಿ.ಸಿ ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಅವುಗಳ ಸಹಾಯದಿಂದ ಸಂಚಾರ ನಿಯಮಗಳನ್ನು ಉಲ್ಲಂಘಿಸಿದ ವಾಹನ ಸವಾರರಿಗೆ ದಂಡ ವಿಧಿಸಲು ಸಹಕಾರಿಯಾಗುವುದಲ್ಲದೇ, ಅಪರಾಧ ಪ್ರಕರಣಗಳನ್ನು ಪತ್ತೆಹಚ್ಚುವಿಕೆಗೂ ಸಹಕಾರಿಯಾಗಲಿದೆ.
>
> – ಜಿ ಪರಮೇಶ್ವರ.
> ಗೃಹ ಸಚಿವರು.



**■ ವಿಜಯಸಾಕ್ಷಿ ಸುದ್ದಿ, ಗದಗ**

ಬೆಂಗಳೂರು ಹೊರತುಪಡಿಸಿದರೆ ಜಿಲ್ಲಾ ಕೇಂದ್ರಗಳಲ್ಲಿ ಪ್ರಥಮ ಬಾರಿಗೆ ಥರ್ಡ್-ಐ ಕಮಾಂಡ್ ಹಾಗೂ ಕಂಟ್ರೋಲ್ ಸೆಂಟರ್ ಜಾರಿಗೊಳಿಸಿದ ಹಿರಿಮೆ ಗದಗ ಜಿಲ್ಲೆಗೆ ಸಲ್ಲುತ್ತದೆ. ಈ ತಂತ್ರಜ್ಞಾನ ಅಳವಡಿಕೆಗಾಗಿ ಸಹಕಾರ ನೀಡಿದ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ ಪಾಟೀಲ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದು ಗೃಹ ಸಚಿವ ಜಿ ಪರಮೇಶ್ವರ್ ಹೇಳಿದರು. ಕಾನೂನು ಸುವ್ಯವಸ್ಥೆ, ಅಪರಾಧಗಳ ತಡೆಗಟ್ಟುವಿಕೆ ಹಾಗೂ ಸಂಚಾರ ನಿರ್ವಹಣಾ ವ್ಯವಸ್ಥೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಗದಗ ಜಿಲ್ಲಾ ಪೊಲೀಸ್ ಕಚೇರಿಯಲ್ಲಿ ನಿರ್ಮಿಸಲಾದ ಥರ್ಡ್-ಐ ಕಮಾಂಡ್ ಮತ್ತು ಕಂಟ್ರೋಲ್ ಸೆಂಟರ್‌ನ್ನು ಶುಕ್ರವಾರ ಉದ್ಘಾಟಿಸಿ ಅವರು ಮಾತನಾಡಿದರು.

ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ ಪಾಟೀಲ ಮಾತನಾಡಿ, ಥರ್ಡ್-ಐ ಪರಿಕಲ್ಪನೆಯನ್ನು ಸಾಕಾರಗೊಳಿಸುವಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್ ನೇಮಗೌಡ ಅವರು ಉತ್ಸುಕತೆ ಹಾಗೂ ಮುತುವರ್ಜಿ ವಹಿಸಿ, ಪ್ರತಿಯೊಂದು ಹಂತಗಳನ್ನು ಖುದ್ದಾಗಿ ಪರಿಶೀಲಿಸಿ ಜಾರಿಗೊಳಿಸಿದ್ದಾರೆ. ಈ ಥರ್ಡ್-ಐ ಕಮಾಂಡ್ ಮತ್ತು ಕಂಟ್ರೋಲ್ ಸೆಂಟರ್‌ನಿಂದ ಸಂಚಾರಿ ನಿಯಮಗಳ ಉಲ್ಲಂಘನೆ ಪ್ರಕರಣಗಳು ನಿಯಂತ್ರಣವಾಗಲಿ ಹಾಗೂ ಅಪರಾಧ ಪ್ರಕರಣಗಳ ಪತ್ತೆಯಲ್ಲಿ ಈ ಯೋಜನೆ ಉಪಯುಕ್ತವಾಗಲಿ ಎಂದ ಸಚಿವರು, ಗದಗ-ಬೆಟಗೇರಿ ನಗರ ವ್ಯಾಪ್ತಿಯಲ್ಲಿ ಅಳವಡಿಸಿದಂತೆ ಜಿಲ್ಲೆಯ ಎಲ್ಲ ನಗರಗಳಿಗೂ ವಿಸ್ತರಿಸಲು ಅಗತ್ಯವಿರುವ ಅನುದಾನವನ್ನು ಗೃಹ ಮಂತ್ರಿಗಳು ಒದಗಿಸುವಂತೆ ಕೋರಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್ ನೇಮಗೌಡ ಮಾತನಾಡಿ, ಥರ್ಡ್-ಐ ಪರಿಕಲ್ಪನೆಯ ಪ್ರತಿಯೊಂದು ಹಂತಗಳನ್ನು ಹಾಗೂ ಕಾರ್ಯಚಟುವಟಿಕೆಯನ್ನು ಸಚಿವರುಗಳಿಗೆ ವಿವರಿಸಿದರು. ಥರ್ಡ್-ಐ ಕಮಾಂಡ್ ಮತ್ತು ಕಂಟ್ರೋಲ್ ಸೆಂಟರ್ ನಿರ್ವಹಣೆಗಾಗಿ ಪೊಲೀಸ್ ಇಲಾಖೆಯಲ್ಲಿನ ತಾಂತ್ರಿಕ ಪದವಿ ಪಡೆದ ಅಧಿಕಾರಿ ಸಿಬ್ಬಂದಿಗಳನ್ನು ಬಳಸಿಕೊಳ್ಳಲಾಗುತ್ತಿದೆ. ಈ ಥರ್ಡ್-ಐ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಥರ್ಡ್-ಐ ಯೋಜನೆಯ ಅನುಷ್ಠಾನಕ್ಕೆ ಹುರುದುಂಬಿಸಿ ಮಾರ್ಗದರ್ಶನ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ ಪಾಟೀಲ ಹಾಗೂ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ಅವರಿಗೂ ಧನ್ಯವಾದ ಸಲ್ಲಿಸಿದರು.

ಈ ಸಂದರ್ಭದಲ್ಲಿ ಶಾಸಕರಾದ ಜಿ.ಎಸ್ ಪಾಟೀಲ, ವಿಧಾನ ಪರಿಷತ್ ಸದಸ್ಯ ಎಸ್.ವಿ ಸಂಕನೂರ, ನಗರ ಸಭೆ ಅಧ್ಯಕ್ಷೆ ಉಷಾ ದಾಸರ, ಉಪಾಧ್ಯಕ್ಷೆ ಸುನಂದಾ ಬಾಕಳೆ, ಬೆಳಗಾವಿ ನಗರ ಪೊಲೀಸ್ ಆಯುಕ್ತ ಎಸ್.ಸಿದ್ದರಾಮಪ್ಪ, ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಸೇರಿದಂತೆ ಗಣ್ಯರು, ಪೊಲೀಸ್ ಅಧಿಕಾರಿ, ಸಿಬ್ಬಂದಿಗಳು, ಸಾರ್ವಜನಿಕರು ಉಪಸ್ಥಿತರಿದ್ದರು.

### ಜಿಲ್ಲಾ ಪೊಲೀಸ್ ಕಚೇರಿಯಲ್ಲಿ ಜರುಗಿದ ಪತ್ರಿಕಾಗೋಷ್ಠಿಯಲ್ಲಿ ಗೃಹ ಸಚಿವ ಡಾ. ಜಿ ಪರಮೇಶ್ವರ

# ಜಿಲ್ಲೆಯನ್ನು ಮಾದಕ ದ್ರವ್ಯ ಮುಕ್ತವಾಗಿಸಲು ಪಣ



> ಜಿಲ್ಲೆಯಲ್ಲಿ ಕ್ರೈಂ ರೇಟ್ ಗಣನೀಯವಾಗಿ ಕಡಿಮೆ ಇರುವದು ಅಭಿನಂದನಾರ್ಹ. ರಾಜ್ಯದಲ್ಲಿ ಮಾದಕ ದ್ರವ್ಯಗಳ ನಿಯಂತ್ರಣಕ್ಕೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಜಿಲ್ಲೆಯಲ್ಲಿ ಇದರ ಪ್ರಭಾವ ತುಂಬಾ ಕಡಿಮೆ ಇದ್ದು, ಆರು ತಿಂಗಳೊಳಗಾಗಿ ಜಿಲ್ಲೆಯನ್ನು ಮಾದಕ ದ್ರವ್ಯ ಮುಕ್ತ ಜಿಲ್ಲೆಯನ್ನಾಗಿ ಮಾಡುವ ಸವಾಲನ್ನು ನೀಡಲಾಗಿದೆ. ಗದಗ ಜಿಲ್ಲೆಯನ್ನು ಮಾದರಿಯನ್ನಾಗಿಟ್ಟುಕೊಂಡು ಇತರೆ ಜಿಲ್ಲೆಗಳು ಕಾರ್ಯ ಪ್ರವೃತ್ತರಾಗುವಂತೆ ಕಾರ್ಯ ನಿರ್ವಹಿಸಲು ಸೂಚನೆ ನೀಡಲಾಗಿದೆ.
>
> – ಜಿ ಪರಮೇಶ್ವರ.
> ಗೃಹ ಸಚಿವರು.

**■ ವಿಜಯಸಾಕ್ಷಿ ಸುದ್ದಿ, ಗದಗ**

ಪೊಲೀಸ್ ಇಲಾಖೆ ನಿರಂತರವಾಗಿ ಆಧುನಿಕತೆಯತ್ತ ನೋಡುತ್ತಿರುತ್ತದೆ. ಸಮಾಜದಲ್ಲಿ ನಡೆಯುವ ಘಟನೆಗಳನ್ನು ಅರಿತು, ಜನರಿಗೆ ನ್ಯಾಯ ಒದಗಿಸಿಕೊಡಲು ಆಧುನಿಕ ತಂತ್ರಜ್ಞಾನಗಳ ಅವಶ್ಯಕತೆಯಿದೆ. ಗದಗ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಿರುವ ಥರ್ಡ್-ಐ ಕಮಾಂಡ್ ಮತ್ತು ಕಂಟ್ರೋಲ್ ಸೆಂಟರ್ ಜಿಲ್ಲೆಯಲ್ಲಿನ ಅಪರಾಧ ಪ್ರಕರಣಗಳ ಪ್ರಮಾಣ ನಿಯಂತ್ರಿಸಲು ಸಹಕಾರಿಯಾಗಿದೆ ಎಂದು ಗೃಹ ಸಚಿವ ಡಾ. ಜಿ ಪರಮೇಶ್ವರ ಹೇಳಿದರು.

ನಗರದ ಜಿಲ್ಲಾ ಪೊಲೀಸ್ ಕಚೇರಿಯಲ್ಲಿ ಜರುಗಿದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಪೊಲೀಸ್ ಇಲಾಖೆಯಲ್ಲಿ ಅಪರಾಧಗಳನ್ನು ಪರಿಹರಿಸುವುದು ಅತ್ಯಂತ ಸವಾಲಿನ ಕಾರ್ಯ. ಇಂತಹ ಸವಾಲಿನ ಕಾರ್ಯವನ್ನು ಸುಸಲಲಿತವಾಗಿ ಪರಿಹರಿಸಲು ಥರ್ಡ್-ಐ ಉಪಯುಕ್ತವಾಗಲಿದೆ. ಜಿಲ್ಲಾ ಪೊಲೀಸ್ ಕಚೇರಿಯಲ್ಲಿ ಪ್ರಾರಂಭಿಸಲಾಗಿರುವ ಈ ಕಮಾಂಡ್ ಸೆಂಟರ್ ನಗರಕ್ಕೆ ಸೀಮಿತವಾಗಿದ್ದರೂ ಸಹ ಮುಂದಿನ ದಿನಗಳಲ್ಲಿ ಇದನ್ನು ಇಡೀ ಜಿಲ್ಲೆಗೆ ವಿಸ್ತರಿಸಲಾಗುವದು. ರಾಜಧಾನಿ ಬೆಂಗಳೂರಿಗೆ ಸಮನಾಗಿ ಈ ಕಾರ್ಯ ಜಿಲ್ಲೆಯಲ್ಲಿ ಜರುಗಿರುವದು ಅಭಿನಂದನಾರ್ಹ ಎಂದರು.

ರಾಜ್ಯದ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ ಪಾಟೀಲ ಮಾತನಾಡಿ, ▸▸3ನೇ ಪುಟಕ್ಕೆ

## ‘ಭಾರತ’ ಪುನರ್‌ನಾಮಕರಣ ವಿರೋಧಿಗಳು ವಿದೇಶಿ ಮನಸ್ಥಿತಿಯವರು



**■ ವಿಜಯಸಾಕ್ಷಿ ಸುದ್ದಿ, ಗದಗ**

ನಮ್ಮ ದೇಶಕ್ಕೆ ಭಾರತ ಎಂಬ ಅಮೂಲ್ಯ ಹೆಸರನ್ನು ಪುನರ್‌ನಾಮಕರಣಗೊಳಿಸಲು ಕೇಂದ್ರ ಸರ್ಕಾರ ಕ್ರಮ ಕೈಕೊಂಡಿರುವುದು ಶ್ಲಾಘನೀಯವಾಗಿದೆ. ವಿದೇಶಿ ಮನಸ್ಥಿತಿಯವರು ಮಾತ್ರ ಈ ನಿರ್ಧಾರವನ್ನು ವಿರೋಧಿಸುತ್ತಾರೆ ಎಂದು ಬಿಜೆಪಿ ಮುಖಂಡರಾದ ವಿಜಯಕುಮಾರ ಗಡ್ಡಿ ಅಭಿಪ್ರಾಯಪಟ್ಟಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ವೇದ-ಪುರಾಣಗಳಲ್ಲೂ ಭಾರತ ಎಂಬ ಹೆಸರೇ ಉಲ್ಲೇಖವಾಗಿದ್ದು, ವಿದೇಶಿಗರು ಈ ದೇಶಕ್ಕೆ ಬಂದ ನಂತರ ಇಂಡಿಯಾ ಎಂಬ ಹೆಸರು ಪ್ರಸಿದ್ಧಿಯಾಯಿತು. ಅದರಲ್ಲೂ ಸುಮಾರು 200 ವರ್ಷ ನಮ್ಮನ್ನು ಆಳಿದ ಬ್ರಿಟಿಷರು ಇಂಡಿಯಾ ಎಂಬ ಹೆಸರನ್ನೇ ಅಧಿಕೃತವಾಗಿಸಿದ ಫಲವಾಗಿ ಈಗಲೂ ಸಹ ಅದೇ ಪ್ರಭಾವ ಉಳಿದುಕೊಂಡಿದೆ. ಸದ್ಯ ಸ್ವಾತಂತ್ರ್ಯ ದೊರಕಿ 75 ವರ್ಷಗಳು ಕಳೆದ ಭಾರತ ಬ್ರಿಟಿಷ್ ದೇಶವಾಗಿ ಇಂಗ್ಲೆಂಡಿಗಿಂತ ಮುಂದುವರೆದ ರಾಷ್ಟ್ರವಾಗಿ ಬೆಳೆಯುತ್ತಿರುವ ಈ ಸಮಯದಲ್ಲಿ ▸▸3ನೇ ಪುಟಕ್ಕೆ

### ರಾಜ್ಯ ಸರ್ಕಾರದ ರೈತ ವಿರೋಧಿ ನೀತಿ ಖಂಡಿಸಿ ಪ್ರತಿಭಟನೆ

# ಬರಪೀಡಿತ ತಾಲೂಕು ಘೋಷಣೆಗೆ ಆಗ್ರಹ

**■ ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ**

ಶುಕ್ರವಾರ ಶಿರಹಟ್ಟಿ ಪಟ್ಟಣದಲ್ಲಿ ಕಾಂಗ್ರೆಸ್ ಸರಕಾರದ ರೈತ ವಿರೋಧಿ ನೀತಿಯ ವಿರುದ್ಧ ಶಿರಹಟ್ಟಿ ಬಿಜೆಪಿ ಮಂಡಲದ ವತಿಯಿಂದ ತಹಸೀಲ್ದಾರರಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಶಿರಹಟ್ಟಿ ಮಂಡಲದ ಬಿಜೆಪಿ ಅಧ್ಯಕ್ಷ ಫಕ್ಕೀರೇಶ ರಟ್ಟಿಹಳ್ಳಿ, ತಾಲೂಕಿನಲ್ಲಿ ಶೇ.80ರಷ್ಟು ಭೂಮಿಯಲ್ಲಿ ಬಿತ್ತನೆ ಆಗಿದ್ದು, ಮಳೆ ಕೊರತೆಯಿಂದಾಗಿ ಬೆಳೆ ಕುಂಠಿತವಾಗಿ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಉಚಿತ ಗ್ಯಾರಂಟಿಗಳ ನೆಪದಲ್ಲಿ ವಿದ್ಯುತ್ ದರ ಏರಿಕೆ ಮತ್ತು



ಅನಿಯಮಿತ ಲೋಡ್‌ಶೆಡ್ಡಿಂಗ್ ಮಾಡುತ್ತಿದ್ದಾರೆ, ಬಿಜೆಪಿ ಸರಕಾರದ ಅವಧಿಯಲ್ಲಿನ ಕಿಸಾನ್ ಸಮ್ಮಾನ, ರೈತ ವಿದ್ಯಾನಿಧಿ ಯೋಜನೆಗಳನ್ನು ಸ್ಥಗಿತಗೊಳಿಸಿ ರೈತರ ಆತ್ಮಹತ್ಯೆಯನ್ನು ತಡೆಯಲಾಗದೇ ರೈತ ವಿರೋಧಿ ಕಾಂಗ್ರೆಸ್ ಸರಕಾರ ಕೃಷಿ ಭೂಮಿ ಮಾರಾಟ ಕಾಯ್ದೆ ರದ್ದುಗೊಳಿಸಿದೆ. ಕ್ಷೀರ ಸಮೃದ್ಧಿ, ▸▸3ನೇ ಪುಟಕ್ಕೆ

### ಜಿಲ್ಲಾಡಳಿತ ಭವನದಲ್ಲಿ ಗೃಹ ಸಚಿವ ಡಾ.ಜಿ ಪರಮೇಶ್ವರ ಮಾಹಿತಿ

# ಪೊಲೀಸ್ ಇಲಾಖೆಯ ಬಡ್ತಿ ಸಮಸ್ಯೆ ಶೀಘ್ರವೇ ನಿವಾರಣೆ

**■ ವಿಜಯಸಾಕ್ಷಿ ಸುದ್ದಿ, ಗದಗ**

ರಾಜ್ಯದಲ್ಲಿ 6ನೇ ವೇತನ ಆಯೋಗ ಜಾರಿಯಾಗಿದೆ. ಆದರೆ ಪೊಲೀಸ್ ಸಿಬ್ಬಂದಿಗೆ ಅದಕ್ಕೆ ಸರಿಸಮಾನವಾದ ವೇತನ, ಭತ್ಯೆ ಸರಿಯಾಗಿ ಸಿಕ್ಕಿಲ್ಲ. ಅದನ್ನು ಆದಷ್ಟು ಬೇಗ ಪರಿಶೀಲನೆ ಮಾಡಿ ಸಮಸ್ಯೆ ಪರಿಹರಿಸುತ್ತೇವೆ ಎಂದು ಗೃಹ ಸಚಿವ ಡಾ. ಜಿ ಪರಮೇಶ್ವರ ಹೇಳಿದರು.

ಶುಕ್ರವಾರ ನಗರದ ಜಿಲ್ಲಾಡಳಿತ ಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪೊಲೀಸ್ ಅಧಿಕಾರಿಗಳಿಗೆ ಬಡ್ತಿ ವಿಚಾರವಾಗಿ



ಕೆಲ ನಿಯಮಗಳನ್ನು ಬದಲಾವಣೆ ಮಾಡಬೇಕಾಗಿದೆ. ವಿಶೇಷವಾಗಿ ಅಂತರ್ ವಲಯ ವರ್ಗಾವಣೆಯಿಂದ ಹಿರಿಯ ಅಧಿಕಾರಿಗಳಿಗೆ ಬಡ್ತಿ ಸಮಸ್ಯೆಯಾಗಿದ್ದು, ಅದನ್ನು ಶೀಘ್ರವೇ ಪರಿಹರಿಸಲಾಗುವುದು ಎಂದರು.

ಕಳೆದ ಬಾರಿ ಗೃಹಸಚಿವನಾಗಿದ್ದ ಸಂದರ್ಭದಲ್ಲಿ 12 ಸಾವಿರ ಪೊಲೀಸರಿಗೆ ಬಡ್ತಿ ನೀಡಲಾಗಿತ್ತು. ಸದ್ಯ 600 ಪಿಎಸ್‌ಐಗಳಿಗೆ ಒಂದು ತಿಂಗಳಲ್ಲಿ ಬಡ್ತಿ ನೀಡಲಾಗುವುದು ಎಂದು ತಿಳಿಸಿದರು. ಸನಾತನ ಧರ್ಮದ ಕುರಿತಾಗಿ ಉದಯನಿಧಿ ಸ್ಟಾಲಿನ್ ಹೇಳಿಕೆ ಕುರಿತು ಪ್ರತಿಕ್ರಿಯಿಸಲು ನಿರಾಕರಿಸಿದ ಸಚಿವ ಡಾ.ಜಿ ಪರಮೇಶ್ವರ, ಅದು ಮುಗಿದು ಹೋದ ಅಧ್ಯಾಯ. ಡಿಎಂಕೆ ನಾಯಕ ಎ. ರಾಜಾ ಹೇಳಿಕೆಗೆ ನಾನೇಕೆ ಪ್ರತಿಕ್ರಿಯಿಸಲಿ? ದೇವೇಗೌಡರು ಮತ್ತು ಅಮಿತ್ ಶಾ ಭೇಟಿಯಿಂದ ಕಾಂಗ್ರೆಸ್ ಮತ್ತಷ್ಟು ಬಲಿಷ್ಠವಾಗಲಿದೆ ಎಂದುತ್ತರಿಸಿದರು.

ಬಿಜೆಪಿ-ಜೆಡಿಎಸ್ ಮೈತ್ರಿ ವಿಚಾರವಾಗಿ ಪ್ರತಿಕ್ರಿಯಿಸಿದ ಸಚಿವ ಎಚ್.ಕೆ ಪಾಟೀಲ, ಬಿಜೆಪಿ ನಾಯಕರು ಭಯಭೀತರಾಗಿದ್ದಾರೆ. ಐದು ಗ್ಯಾರಂಟಿ ಯೋಜನೆ ಬಂದ ಮೇಲೆ ಬಿಜೆಪಿಗೆ ನಡುಕ ಶುರುವಾಗಿದೆ. ಹೀಗಾಗಿ ಬಿಜೆಪಿಯೊಂದಿಗೆ ಹೊಂದಾಣಿಕೆಗೆ ಮುಂದಾಗಿದ್ದಾರೆ. ಸದ್ಯ ಕಾಂಗ್ರೆಸ್ ಬಲಿಷ್ಠವಾಗಿದೆ ಎಂದು ಉತ್ತರಿಸಿದರು.

## ರೋಣ ತಾಲೂಕಿನಲ್ಲಿ ಸೆ. 12 ರಂದು ವಿದ್ಯುತ್ ವ್ಯತ್ಯಯ

**■ ವಿಜಯಸಾಕ್ಷಿ ಸುದ್ದಿ, ಗದಗ**

110/33/11ಕೆ.ವ್ಹಿ ಮತ್ತು 33/11 ಕೆ.ವ್ಹಿ ಹೊಳೆಆಲೂರ ವಿದ್ಯುತ್ ವಿತರಣಾ ಉಪ-ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣಾ ಕೆಲಸ ಕೈಗೊಳ್ಳುವುದರಿಂದ ಸೆಪ್ಟೆಂಬರ್ 12 ರಂದು ಬೆಳಿಗ್ಗೆ 10 ಘಂಟೆಯಿಂದ ಸಾಯಂಕಾಲ 05.30 ಘಂಟೆಯವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುತ್ತದೆ.

ಮೇಲ್ಕಂಡ ವಿದ್ಯುತ್ ವಿತರಣಾ ಕೇಂದ್ರದಿಂದ ವಿದ್ಯುತ್ ಪೂರೈಕೆಯಾಗುತ್ತಿರುವ ಗ್ರಾಮಗಳಾದ ಹಿರೇಹಾಳ, ಬಳಗೋಡ, ಹೊನ್ನಿಗನೂರ, ಮಾಡಲಗೇರಿ, ನೈನಾಪೂರ, ಕೊತಬಾಳ, ಮುಗುಳಿ, ತಳ್ಳಿಹಾಳ, ಹೊಳೆ ಆಲೂರ, ಹುನಗುಂಡಿ, ಬೆನಹಾಳ, ಅಮರಗೋಳ, ಕುರುವಿನ ಕೊಪ್ಪ, ಹೊಳೆ ಹಡಗಲಿ, ಬಿ ಎಸ್ ಬೇಲೇರಿ, ಬಸರಕೋಡ, ಅಸೂಟಿ, ಮೇಲ್ಮಠ, ಮೇಗೂರು, ಕರಮಡಿ, ಮಾಳವಾಡ, ಬೋಪಳಾಪೂರ, ಗಾಡಗೋಳಿ, ಹೊಳೆ ಮಣ್ಣೂರ, ಮೆಣಸಗಿ, ಕರಕಿಕಟ್ಟಿ, ಗುಳಗುಂದಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಸಾರ್ವಜನಿಕರು ಕಂಪನಿಯೊಂದಿಗೆ ಸಹಕರಿಸಬೇಕೆಂದು ಹೆಸ್ಕಾಂ ಪ್ರಕಟಣೆ ತಿಳಿಸಿದೆ.

## ಗದಗ-ಬೆಟಗೇರಿ ಅವಳಿ ನಗರದಲ್ಲಿ ಇಂದು ನೀರು ಪೂರೈಕೆ ಎಲ್ಲೆಲ್ಲಿ

**■ ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ಬೆಟಗೇರಿ ಅವಳಿ ನಗರದ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಸೆಪ್ಟೆಂಬರ್ 9 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

**ಸ್ಥಳಗಳ ವಿವರ:** ವಾರ್ಡ್ ನಂ. 35ರಲ್ಲಿ ನೀಲಮ್ಮ ತಾಯಿಮಠದ ಲೈನ್, ಆದರ್ಶನಗರ ಲೈನ್, ಗಡಗಿಯವರ ಲೈನ್, ದೇವರಾಜ ಹಾಸ್ಟೆಲ್ ಲೈನ್, ಪತ್ತಾರ ಸರ್ ಲೈನ್, ಬಾಲಾಜಿ ನಗರ, ಇಂಡಸ್ಟ್ರೀಜ್ ಸ್ಟೇಡಿಯಂ ಲೈನ್, 9ನೇ ಸ್ಕೂಲ್ ಆಂಜನೇಯ ಗುಡಿ ಲೈನ್, ವಾರ್ಡ್ ನಂ. 11ರಲ್ಲಿ ನಿಸರ್ಗ ಬಡಾವಣೆ, ಅಬ್ದುಲ್ ಕಲಾಮ್ ಲೈನ್, ರಿಂಗ್‌ರೋಡ್ ಲೈನ್, ಶಿವಬಸವನಗರ ಕೆಲವು ಭಾಗಗಳು, ವಾರ್ಡ್ ನಂ. 07ರಲ್ಲಿ ಪೆಂಡಾರ್ ಓಣಿ, ಮಲ್ಲೇಶಪ್ಪನ ಲೈನ್, ನಂದರಗಿಯವರ ಲೈನ್, ಅಬ್ಬಿಗೇರಿ ಲೈನ್, ಗಚ್ಚಿಯವರ ಲೈನ್, ಬಚ್ಚಲಕ್ಕಮ್ಮನ ಗುಡಿ ಲೈನ್, ಚೆನ್ನೆಗೌಡ್ರ ಲೈನ್ ಹುಚ್ಚನಗೌಡ್ರ ಲೈನ್, ವಾರ್ಡ್ ನಂ. 21, 22ರಲ್ಲಿ ವಿಜಯನಗರ ಸ್ಕೂಲ್, ವಾಲ್ಮೀಕಿ ಭವನ, ಕರುಗಲ್ಲ ಲೇಔಟ್ ಪವರ್ ಕಂಬದ ಲೈನ್, ಶಿಗ್ಗಾಂವಿ ಲೈನ್, ವಿವಿಧ ಭಾಗಗಳು, ವಾರ್ಡ್ ನಂ. 23, 21ರಲ್ಲಿ ಜಂತ್ಲಿಯವರ ಲೈನ್, ಜಕ್ಕಲಿಯವರ ಲೈನ್, ಹೊಸ ಲೈನ್, ಕುಂಬಾರ ಲೈನ್, ದ್ಯಾಮವ್ವನಕಟ್ಟಿ ಉಸಗಿನಗಟ್ಟಿ ಓಣಿ, ಪಡಗದ ಭಾಗ-1, ಭಾಗ-2 ಶಕ್ತಿಮಾನ್ ಲೈನ್, ಬೇವಿನಮರದಮ್ಮನ ಲೈನ್, ವಾರ್ಡ್ ನಂ. 27ರಲ್ಲಿ ಕಾಶಿ ವಿಶ್ವನಾಥನಗರ, ಅಸೂಟಿಯವರ ಲೈನ್, ಹನುಮಾನ ನಗರ ಲೈನ್, ದುರಗಮ್ಮನ ಗುಡಿ ಲೈನ್, ಕಣವಿ ಲೈನ್, ವಾರ್ಡ್ ನಂ. 30ರಲ್ಲಿ ಟಿ.ವಿ.ಎಸ್. ಶೋ ರೂಮ್, ಮುತ್ತಿನಪೆಂಡಿಮಠ ಲೈನ್, ಅಬ್ಬಿಗೇರಿ ಲೈನ್, ಪೊಲೀಸ್ ಕ್ವಾರ್ಟರ್ಸ್ ಲೈನ್, ರೋಣದ ಲೈನ್, ಪುಟ್ಟರಾಜನಗರ

ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಒಂದು ವೇಳೆ ಅಡತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕೆಂದು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಉದ್ಯಾನವನದಲ್ಲಿ ಉದಯರಾಗ, ಸಂಧ್ಯಾರಾಗ ಕಾರ್ಯಕ್ರಮ

**■ ವಿಜಯಸಾಕ್ಷಿ ಸುದ್ದಿ, ಗದಗ**

ಉದ್ಯಾನವನದಲ್ಲಿ ಉದಯರಾಗ ಹಾಗೂ ಸಂಧ್ಯಾರಾಗ ಕಾರ್ಯಕ್ರಮದಲ್ಲಿ, ಸೆಪ್ಟೆಂಬರ್ 10 ರಂದು ಬೆಳಿಗ್ಗೆ:6.30 ರಿಂದ 7.30 ರವರೆಗೆ ನಡೆಯುವ ಉದಯರಾಗ ಕಾರ್ಯಕ್ರಮದಲ್ಲಿ ರಾಜೀವಗಾಂಧಿ ನಗರದ ಶಿವಶರಣ ಹರಳಯ್ಯ ಉದ್ಯಾನವನದಲ್ಲಿ ಕು.ಮಲ್ಲೇಶ ಹೂಗಾರ ರವರಿಂದ “ಸುಗಮ ಸಂಗೀತ” ವಿಶ್ವೇಶ್ವರಯ್ಯ ನಗರದ ವಿಶ್ವೇಶ್ವರಯ್ಯ ಉದ್ಯಾನವನದಲ್ಲಿ ಕು.ಶ್ರೀರಾಮ ಸುಡಗಾಡಸಿದ್ದ ಇವರಿಂದ “ಹಿಂದೂಸ್ತಾನಿ ಸಂಗೀತ” ಸಾಯಂಕಾಲ: 5.30 ರಿಂದ 6.30 ಗಂಟೆಯವರೆಗೆ ಭೀಷ್ಮಕೆರೆಯ ಬಸವೇಶ್ವರ ಪುತ್ಥಳಿ ಆವರಣದಲ್ಲಿ ನಡೆಯುವ ಸಂಧ್ಯಾರಾಗ ಕಾರ್ಯಕ್ರಮದಲ್ಲಿ ಶರಣಪ್ಪ ಎನ್ ಹಿರೇಮನಿ ಇವರಿಂದ “ಜಾನಪದ ಸಂಗೀತ” ಕಾರ್ಯಕ್ರಮಗಳನ್ನು ಏರ್ಪಡಿಸಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಾಕ್ಷಿ ಸುಭಾಷಿತ

ದೇವರು ಯಾವಾಗಲೂ ಎಲ್ಲ ಕಡೆಯಲ್ಲೂ ಇರುವುದು ಸಾಧ್ಯವಿಲ್ಲ; ಆದ್ದರಿಂದಲೇ ಅವರು ತಾಯಂದಿರನ್ನು ಸೃಷ್ಟಿಸಿದ

–ಎಡ್ವಿನ್ ಅರ್ನಾಲ್ಡ್

## ಸಂಪಾದಕೀಯ

# ಬಿಜೆಪಿ ಜೆಡಿಎಸ್ ಮೈತ್ರಿ ಸನ್ನಿಹಿತ

ರಾಜ್ಯ ರಾಜಕಾರಣದಲ್ಲಿ ನಿರೀಕ್ಷೆಯಂತೆ ಭಾರತೀಯ ಜನತಾ ಪಾರ್ಟಿ ಮತ್ತು ಜಾತ್ಯಾತೀತ ಜನತಾದಳ ಮೈತ್ರಿ ಕೆಲವೇ ದಿನಗಳಲ್ಲಿ ಅಧಿಕೃತವಾಗಿ ಪ್ರಕಟವಾಗುವ ಎಲ್ಲ ಸಾಧ್ಯತೆಗಳು ರಾಜಕೀಯ ಬೆಳವಣಿಗೆಯಿಂದ ಸ್ಪಷ್ಟವಾಗುತ್ತಿದೆ.

ಮುಂಬರುವ 2024ರ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ಮತ್ತು ಜೆಡಿಎಸ್ ದೋಸ್ತಿಯಾಗಿ ಎದುರಿಸುವುದು ನಿಶ್ಚಿತವಾಗಿದೆ. ಕೇವಲ ನಾಲ್ಕೈದು ಕ್ಷೇತ್ರಗಳಲ್ಲಿ ಜೆಡಿಎಸ್ ಅಭ್ಯರ್ಥಿ ಕಣಕ್ಕಿಳಿಯುವುದು ನಿಶ್ಚಿತವಾಗಿದೆ. ರಾಜ್ಯದ ಉಳಿದೆಲ್ಲ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಕಾಂಗ್ರೆಸ್ ಎದುರಿಸಲಿದ್ದಾರೆ.

ಮೈತ್ರಿಯಿಂದ ಎರಡೂ ಪಕ್ಷಗಳಿಗೂ ಲಾಭದ ಲೆಕ್ಕಾಚಾರ ಸ್ಪಷ್ಟವಾಗಿದೆ. ಸ್ವತಂತ್ರವಾಗಿ ಒಂದೇ ಒಂದು ಸ್ಥಾನ ಗೆಲ್ಲುವುದು ಕಷ್ಟವಾಗಿರುವ ಜೆಡಿಎಸ್, ತನ್ನ ಮೂಲ ಬೇರುಗಳು ಗಟ್ಟಿಯಾಗಿರುವ ನಾಲ್ಕೈಕು ಕಡೆಗಳಲ್ಲಿ ಮಾತ್ರ ಗಮನ ಕೇಂದ್ರೀಕರಿಸಿ ಚುನಾವಣೆ ಎದುರಿಸುವ ತವಕದಲ್ಲಿದೆ. ಇನ್ನು ಜೆಡಿಎಸ್ ಪ್ರಾಬಲ್ಯದ ಕ್ಷೇತ್ರಗಳಲ್ಲಿ ಸ್ಪರ್ಧಿಸಿ, ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವಿಗೆ ಕಾರಣವಾಗುವುದಕ್ಕಿಂತ ಜೆಡಿಎಸ್ ಜೊತೆ ಮೈತ್ರಿ ಮಾಡಿಕೊಂಡು ಕಾಂಗ್ರೆಸ್ ಸೋಲಿಸುವುದು ಉತ್ತಮ ಎನ್ನುವುದು ಬಿಜೆಪಿ ಪ್ಲಾನ್ ಆಗಿದೆ.

ಇಷ್ಟೆ ಅಲ್ಲದೇ ರಾಜ್ಯದ ಇನ್ನಿತರ ಕ್ಷೇತ್ರಗಳಲ್ಲಿ ಜೆಡಿಎಸ್ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸದೆ ಬಿಜೆಪಿಯನ್ನು ಬೆಂಬಲಿಸುವುದರಿಂದ ಲೋಕಸಭೆ ಚುನಾವಣೆಯಲ್ಲಿ ಜೆಡಿಎಸ್ ಮತಗಳು ಬಿಜೆಪಿಗೆ ಬರುತ್ತವೆ ಎನ್ನುವ ಲೆಕ್ಕಾಚಾರ ಬಿಜೆಪಿ ವಲಯದಿಂದ ಕೇಳಿಬರುತ್ತಿದೆ.

ಬಿಜೆಪಿ ಮತ್ತು ಜೆಡಿಎಸ್ ಲೆಕ್ಕಾಚಾರ ಏನೇ ಇರಲಿ, ಸದ್ಯಕ್ಕೆ ಕಾಂಗ್ರೆಸ್ ಜನರ ಮನಸ್ಸು ಗೆದ್ದಿರುವುದು ನಿಜ. ಗ್ಯಾರಂಟಿ ಕಾರ್ಯಕ್ರಮದಿಂದ ರಾಜ್ಯದ ಜನರ ಮನ ಗೆದ್ದಿರುವ ಕಾಂಗ್ರೆಸ್, ಲೋಕಸಭೆ ಚುನಾವಣೆಯಲ್ಲಿಯೂ ಒಂದಷ್ಟು ಕಮಾಲ್ ತೋರಿಸಲು ಸಾಕಷ್ಟು ಯೋಜನೆ ರೂಪಿಸುತ್ತಿದೆ.

ಇದನ್ನು ಅರಿತಿರುವ ಬಿಜೆಪಿ ಮತ್ತು ಜೆಡಿಎಸ್, ತಮ್ಮ ಅಸ್ತಿತ್ವ ರಕ್ಷಣೆಗಾಗಿ ಮೈತ್ರಿ ಮೊರೆ ಹೋಗಿದ್ದಾರೆ. ಇಂಡಿಯಾ ಮೈತ್ರಿಕೂಟದಿಂದ ದೇವೇಗೌಡರು ಅಂತರ ಕಾಯ್ದುಕೊಂಡಾಗಲೇ ಅವರು ಬಿಜೆಪಿ ಜೊತೆ ಮೈತ್ರಿ ಮಾಡಿಕೊಳ್ಳುವುದು ಸ್ಪಷ್ಟವಾಗಿತ್ತು. ಸದ್ಯ ಕೇಂದ್ರ ಗೃಹ ಸಚಿವ ಅಮಿತ್ ಶಾ ಜೊತೆ ಚರ್ಚೆಯನ್ನೂ ನಡೆಸಿರುವ ದೇವೇಗೌಡರು, ಶೀಘ್ರದಲ್ಲಿಯೇ ಮೈತ್ರಿಯ ಮತ್ತಷ್ಟು ವಿವರಗಳನ್ನು ಒದಗಿಸಲಿದ್ದಾರೆ.

# ಮೌನೇಶ್ವರ ಪ್ರಭುಗಳ ಪಾಲಕಿ ಮಹೋತ್ಸವ



■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಪಟ್ಟಣದ ವಿಶ್ವಕರ್ಮ ಸಮಾಜ ವಿಕಾಸ ಕಮಿಟಿ ವತಿಯಿಂದ ಮೌನೇಶ್ವರ ಪ್ರಭುಗಳ 41ನೇ ವರ್ಷದ ಪಾಲಕಿ ಮಹೋತ್ಸವ ಕಾರ್ಯಕ್ರಮ ಗುರುವಾರ ಅದ್ದೂರಿಯಾಗಿ ಜರುಗಿತು.

ಬೆಳಿಗ್ಗೆ ಶ್ರೀಶೈಲ ಆಚಾರ್ ಹಾಗೂ ದೇವಸ್ಥಾನದ ಅರ್ಚಕರಾದ ದೇವೇಂದ್ರಪ್ಪನವರ ಪೌರೋಹಿತ್ಯದಲ್ಲಿ ಮೌನೇಶ್ವರ ಸ್ವಾಮಿಗೆ ಪಂಚಾಮೃತ ಅಭಿಷೇಕ, ಅಷ್ಟೋತ್ತರದೊಂದಿಗೆ ವಿಶೇಷ ಪೂಜೆ ನಡೆಯಿತು. ಬೆಳಿಗ್ಗೆ 10ಕ್ಕೆ ಮೌನೇಶ್ವರ ದೇವಸ್ಥಾನದಿಂದ ಸ್ವಾಮಿಯ ಉತ್ಸವ ಮೂರ್ತಿಗೆ ಪೂಜೆ ಸಲ್ಲಿಸುವ ಮೂಲಕ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಕಲ ವಾದ್ಯಮೇಳ ಹಾಗೂ ಪುರವಂತರ ಸೇವೆಯೊಂದಿಗೆ ಪಾಲಕಿ ಉತ್ಸವದ ಮೆರವಣಿಗೆ ನಡೆಯಿತು.

ಪಾಲಕಿ ಉತ್ಸವದಲ್ಲಿ ನೂರಾರು ಮಹಿಳೆಯರು ಕಳಸದಿಂದ ಆರತಿ ಮಾಡಿದರು. ದೇವಸ್ಥಾನದ ಬಳಿ ಮೆರವಣಿಗೆ ಮುಕ್ತಾಯಗೊಂಡ ಬಳಿಕ ಸಕಲ ಸದ್ಭಕ್ತರಿಗೆ ಮಹಾಪ್ರಸಾದ ವಿತರಣೆ ಜರುಗಿತು.

ಸಮಾಜದ ಅಧ್ಯಕ್ಷ ವಿರೂಪಾಕ್ಷಪ್ಪ ಬಡಿಗೇರ, ಉಪಾಧ್ಯಕ್ಷ ಹನಮಂತ ಮುದಗಲ್ಲ, ಸೂರ್ಯನಾರಾಯಣ ಪತ್ತಾರ, ವಸಂತ ಬಡಿಗೇರ, ಶ್ರೀನಿವಾಸ ಸವದಿ, ರಂಗು ಕಮ್ಮಾರ, ವಿಠ್ಠಲ ಸವದಿ, ಮಾನಪ್ಪ ಕಮ್ಮಾರ, ವಿರೇಶ ಬಡಿಗೇರ, ಪರಶುರಾಮ ಕಮ್ಮಾರ, ನಾಗರಾಜ ಸವದಿ, ಸುರೇಶ ಪತ್ತಾರ, ಶಂಕ್ರಪ್ಪ ಬಡಿಗೇರ, ಸುರೇಶ ಹೊರಪೇಟಿ, ಸಂತೋಷ ಬೆನಹಾಳ, ರಾಘವೇಂದ್ರ ಹಳ್ಳದ, ಮಂಜುನಾಥ ಬಡಿಗೇರ, ಕೃಷ್ಣ ಕಂಚಗಾರ, ಮಂಜುನಾಥ ಗುಡೂರ, ಮಲ್ಲಿಕಾರ್ಜುನ ಬಡಿಗೇರ ಹಾಗೂ ಕಾಳಿಕಾ ಮಹಿಳಾ ಮಂಡಳಿಯ ಸರ್ವ ಸದಸ್ಯರು ಸೇರಿದಂತೆ ವಿಶ್ವಕರ್ಮ ಸಮಾಜ ಬಾಂಧವರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

## ಗದಗ ಉತ್ಸವದಲ್ಲಿ ಮಹಿಳಾ ಘಟಕದಿಂದ ಉದ್ಯಮಶೀಲತೆಯ ಕುರಿತು ಸಂವಾದ

# ಸಿರಿಧಾನ್ಯ-ಉತ್ತರ ಕರ್ನಾಟಕ ದೇಸೀ ಅಡುಗೆ ಸ್ಪರ್ಧೆ




■ವಿಜಯಸಾಕ್ಷಿ ಸುದ್ದಿ, ಗದಗ

ಗದುಗಿನ ತೋಂಟದ ಸಿದ್ಧಲಿಂಗೇಶ್ವರ ಕಲ್ಯಾಣ ಕೇಂದ್ರದಲ್ಲಿ ನಡೆಯುವ 'ಗದಗ ಉತ್ಸವ'ದಲ್ಲಿ ಉದ್ಯಮಶೀಲತೆಯ ಕುರಿತು ಸಂವಾದ, ಸಿರಿಧಾನ್ಯಗಳಲ್ಲಿ ಒಂದು ಸಿಹಿ ಮತ್ತು ಖಾರದ ಉತ್ತರ ಕರ್ನಾಟಕ ದೇಸೀ ಅಡುಗೆ ಸ್ಪರ್ಧೆ ಏರ್ಪಡಿಸಲಾಗಿದೆ ಎಂದು ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ ಮಹಿಳಾ ಘಟಕದ ಅಧ್ಯಕ್ಷೆ ಜಯಶ್ರೀ ತಾತನಗೌಡ ಪಾಟೀಲ ಹೇಳಿದರು.

ಶುಕ್ರವಾರ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ ಸಭಾಂಗಣದಲ್ಲಿ ಮಹಿಳಾ ಘಟಕವು ಹಮ್ಮಿಕೊಂಡಿದ್ದ ಉತ್ಸವದ ಪೂರ್ವಭಾವಿ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು.

ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆ, ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ, ಗ್ರಾಮೀಣ ಮತ್ತು ಸಣ್ಣ ಉದ್ಯಮ ವಿಭಾಗ, ಗದಗ ಜಿ.ಪಂನಿಂದ ಸೆ. 9ರಿಂದ ಸೆ. 13ರವರೆಗೆ ನಡೆಯಲಿರುವ ಗದಗ ಉತ್ಸವ ಕೈಗಾರಿಕಾ ವಸ್ತು ಪ್ರದರ್ಶನಕ್ಕೆ ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ ಮಹಿಳಾ ಘಟಕ ಸಾಥ್ ನೀಡುವುದಲ್ಲದೆ ಸೆ. 11 ಹಾಗೂ 13ರಂದು ಮಹಿಳಾ ಘಟಕದಿಂದಲೂ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಸೆ. 11 ರಂದು ಸೋಮವಾರ ಸಂಜೆ 4 ಗಂಟೆಗೆ ಉದ್ಯಮಶೀಲತೆಯ ಕುರಿತು ನಡೆಯುವ ಸಂವಾದ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಶ್ರೀಗಂಧ ಮತ್ತು ತೋಟಗಾರಿಕೆಯಲ್ಲಿ ಸಾಧನೆ ಮಾಡಿರುವ ಸಾಧಕ ರೈತ ಮಹಿಳೆ ಕವಿತಾ ಮಿಶ್ರಾ, ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ಗದಗ ಪ್ರಾದೇಶಿಕ ಕಚೇರಿಯ ಪ್ರಬಂಧಕ ಪ್ರಕಾಶ ಎ, ಹುಲಕೋಟಿಯ ಗ್ರಾಮೀಣ ಉದ್ಯೋಗ ತರಬೇತಿ ಸಂಸ್ಥೆಯ ನಿರ್ದೇಶಕ ಪಂಚಾಕ್ಷರಿ ಹೊಸಮನಿ, ಧಾರವಾಡ ಸಿಡಾಕ್ ಜಂಟಿ ನಿರ್ದೇಶಕ ಸಿ.ಎಚ್ ಅಂಗಡಿ, ಗದಗ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಶಿವಪುತ್ರಪ್ಪ ಹರಿಜನ ಆಗಮಿಸುವರು. ಅಧ್ಯಕ್ಷತೆಯನ್ನು ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ ಮಹಿಳಾ ಘಟಕದ ಅಧ್ಯಕ್ಷೆ ಜಯಶ್ರೀ ಪಾಟೀಲ ವಹಿಸುವರು.

ಸೆ. 13ರಂದು 12 ಗಂಟೆಗೆ ತೋಂಟದ ಸಿದ್ಧಲಿಂಗೇಶ್ವರ ಕಲ್ಯಾಣ ಕೇಂದ್ರದಲ್ಲಿ 'ಸಿರಿಧಾನ್ಯಗಳಲ್ಲಿ ಒಂದು ಸಿಹಿ ಮತ್ತು ಖಾರ' ಉತ್ತರ ಕರ್ನಾಟಕ ದೇಶಿ ಅಡುಗೆ ಸ್ಪರ್ಧೆ ಏರ್ಪಡಿಸಲಾಗಿದ್ದು, ನಿರ್ಣಾಯಕರಾಗಿ ಗದಗ-ಬೆಟಗೇರಿ ಇನ್ನರ್‌ವ್ಹೀಲ್ ಕ್ಲಬ್ ಅಧ್ಯಕ್ಷೆ ರಜನಿ ಪಾಟೀಲ, ದೇಶೀಯ ಅಡುಗೆ ಪರಿಣಿತರಾದ ಮಲ್ಲಾಪೂರದ ಕಸ್ತೂರಿ ದಾನಪ್ಪಗೌಡ್ರ ಆಗಮಿಸುವರು. ಅಧ್ಯಕ್ಷತೆಯನ್ನು ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ ಮಹಿಳಾ ಘಟಕದ ಅಧ್ಯಕ್ಷೆ ಜಯಶ್ರೀ ಪಾಟೀಲ ವಹಿಸುವರು.

ಸ್ಪರ್ಧೆಯಲ್ಲಿ ಭಾಗಹಿಸುವ ಮಹಿಳೆಯರಿಗೆ ವಯಸ್ಸಿನ ನಿರ್ಬಂಧವಿಲ್ಲ, ಅಡುಗೆಯನ್ನು ತಮ್ಮ ಮನೆಯಲ್ಲಿ ಸಿದ್ಧಪಡಿಸಿಕೊಂಡು ಕಲ್ಯಾಣ ಮಂಟಪಕ್ಕೆ ತರಬೇಕು. ಅಲ್ಲಿ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಲಾಗುವದು. ಅಡುಗೆ ಮಾಡಿದ ಸ್ಪರ್ಧಾಳುಗಳೇ ಪ್ರದರ್ಶನದ ಸಂದರ್ಭದಲ್ಲಿದ್ದು ನಿರ್ಣಾಯಕರ ಪ್ರಶ್ನೆಗೆ ಉತ್ತರಿಸಬೇಕು. ಅಡುಗೆ ಸ್ಪರ್ಧೆ ಕುರಿತು ಹೆಚ್ಚಿನ ಮಾಹಿತಿಗಾಗಿ ಸುವರ್ಣಾ ಮದರಿಮಠ ಮೊ: 9886615359, ಜಯಶ್ರೀ ಪಾಟೀಲ ಮೊ: 9902598469 ಅವರನ್ನು ಸಂಪರ್ಕಿಸಬಹುದು ಎಂದು ವಿವರಣೆ ನೀಡಿದರು.

ಮಹಿಳಾ ಘಟಕದ ಉಪಾಧ್ಯಕ್ಷರಾದ ಶೋಭಾ ಸಂಶಿಮಠ, ನೀಲಾಂಬಿಕಾ ತೋಟದ, ವೀಣಾ ಪೊತ್ನೀಸ್, ಗೌರವ ಕಾರ್ಯದರ್ಶಿ ಸುವರ್ಣಾ ಮದರಿಮಠ, ಪ್ರಭಾ ಗದಗ, ಸುರೇಖಾ ಮಲ್ಲಾಡದ, ಕೋಶಾಧ್ಯಕ್ಷೆ ಜ್ಯೋತಿ ದಾನಪ್ಪಗೌಡ್ರ, ಸುಷ್ಮಾ ಜಾಲಿ, ನಂದಾ ಬಾಳಿಹಳ್ಳಿಮಠ ಕಾರ್ಯಕ್ರಮ ಯಶಸ್ಸಿಗೆ ಸಲಹೆ ನೀಡಿದರು.

### ಸ್ಪರ್ಧೆ ವಿಂಗಡಣೆ

ಸಿರಿಧಾನ್ಯದಿಂದ ಸಿದ್ಧಪಡಿಸಿದ ಖಾರದ ಪದಾರ್ಥ, ಸಿಹಿ ಪದಾರ್ಥ ಈ ಎರಡೂ ವಿಭಾಗದಿಂದ ಸ್ಪರ್ಧೆಗೆ ತಲಾ ಮೂರು ಆಯ್ಕೆ ಮಾಡಲಾಗುವದು. ದೇಸಿ ಧಾನ್ಯದಿಂದ ಸಿದ್ಧಪಡಿಸಿದ ಖಾರದ ಪದಾರ್ಥ, ದೇಸಿ ಧಾನ್ಯದಿಂದ ಸಿದ್ಧಪಡಿಸಿದ ಸಿಹಿ ಪದಾರ್ಥ ಇದರಲ್ಲೂ ಸಹ ಎರಡೂ ವಿಭಾಗದಿಂದ ತಲಾ ಮೂರು ಆಯ್ಕೆ ಮಾಡಲಾಗುವದು. ಒಟ್ಟು 12 ಆಕರ್ಷಕ ಬಹುಮಾನಗಳಿವೆ. ಪ್ರವೇಶ ಉಚಿತ, ಭಾಗವಹಿಸಿದವರಿಗೆ ಪ್ರಮಾಣ ಪತ್ರ ಖಚಿತ.

## ಶ್ರೀ ಸಿದ್ಧಾರೂಢ ಮಠದಲ್ಲಿ ಶಿವಾನುಭವ, ಕಣ್ಣಿನ ಔಷಧಿ ವಿತರಣಾ ಕಾರ್ಯಕ್ರಮ

# ಶ್ರೀಮಠದಿಂದ ಆರೋಗ್ಯ ಕ್ಷೇತ್ರದಲ್ಲಿ ಸೇವಾ ಕಾರ್ಯ



ಶ್ರೀ ಮಠದಲ್ಲಿ ಶಿವಾನುಭವ ಹಾಗೂ ಹೋಳಿಗೆಯೊಂದಿಗೆ ಮಹಾ ಅನ್ನಸಂತರ್ಪಣೆ ನಡೆಯುತ್ತಿದ್ದು, ಈ ಪ್ರಸಾದ ಸೇವೆಯನ್ನು ಗದುಗಿನ ಸತೀಶ ಸಿ.ಕಬಾಡಿ, ಸಂತೋಷ ಸಿ.ಕಬಾಡಿ, ಹುಬ್ಬಳ್ಳಿಯ ಶಿವಯೋಗಿ ಬಸವರಾಜ ಉಳ್ಳಾಗಡ್ಡಿ, ಲಕ್ಷ್ಮೀ ಶಿವಯೋಗಿ ಉಳ್ಳಾಗಡ್ಡಿಯವರು ವಹಿಸಿಕೊಂಡಿದ್ದರು. ಇವರನ್ನು ಶ್ರೀ ಮಠದಿಂದ ಪೂಜ್ಯರು ಸನ್ಮಾನಿಸಿದರು. ಶ್ರೀ ಮಠದ ಜೀರ್ಣೋದ್ಧಾರಕ್ಕೆ ಬೆನಕೊಪ್ಪದ ಮಲ್ಲಣ್ಣಾ ಬೆಟದೂರ ರೂ.25,001 ದೇಣಿಗೆ ನೀಡಿದರು.

■ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿನ ಸದ್ಗುರು ಶ್ರೀ ಸಿದ್ಧಾರೂಢ ಮಠದಲ್ಲಿ ಶ್ರೀ ಸದ್ಗುರು ಈಶ್ವರಾನಂದಸ್ವಾಮಿ ಸೇವಾ ಟ್ರಸ್ಟ್ ವತಿಯಿಂದ ಶಿವಾನುಭವ ಹಾಗೂ ಉಚಿತ ಕಣ್ಣಿನ ಔಷಧಿ ವಿತರಣಾ ಕಾರ್ಯಕ್ರಮ ಜರುಗಿತು.

ಕಾರ್ಯಕ್ರಮದ ಅಧ್ಯಕ್ಷತೆ ಹಾಗೂ ದಿವ್ಯ ಸಾನ್ನಿಧ್ಯವನ್ನು ಶ್ರೀ ಮಠದ ಪೀಠಾಧಿಪತಿ ಸದ್ಗುರು ಶ್ರೀ ಈಶ್ವರಾನಂದ ಸ್ವಾಮಿಗಳ ವಹಿಸಿ ಮಾತನಾಡಿ, ಎಲ್ಲ ಸದ್ಭಕ್ತರ ಸೇವೆಯಿಂದ ಇಲ್ಲಿ ಧಾರ್ಮಿಕ ಕಾರ್ಯಕ್ರಮಗಳು ಯಶಸ್ವಿಯಾಗಿ ಜರುಗುತ್ತಿವೆ. ಅದರಂತೆ ಆರೋಗ್ಯ ಕ್ಷೇತ್ರದಲ್ಲಿ ಸೇವಾ ಕಾರ್ಯವಾಗಬೇಕೆಂದು ಸದ್ಗುರು ಸಿದ್ಧಾರೂಢರ ಪ್ರೇರಣೆಯಿಂದ ಪ್ರತಿ ಹುಣ್ಣಿಮೆಯಂದು ಶಿವಾನುಭವದೊಂದಿಗೆ ಕಣ್ಣಿನ ಔಷಧಿಯ ಉಚಿತ ವಿತರಣೆಯನ್ನು ಶ್ರೀ ಮಠದಿಂದ ಹಮ್ಮಿಕೊಳ್ಳಲಾಗಿದೆ. ಎಲ್ಲ ಸದ್ಭಕ್ತರು ಹಾಗೂ ಸಾರ್ವಜನಿಕರು ಸದಬಳಕೆ ಮಾಡಿಕೊಳ್ಳುತ್ತಿದ್ದು, ಶ್ರೀ ಮಠದ ಜೀರ್ಣೋದ್ಧಾರಕ್ಕೆ ಎಲ್ಲರ ಸಹಕಾರ ಬಹಳ ಅವಶ್ಯವಿದೆ. ಎಲ್ಲರೂ ಈ ಕಾರ್ಯದಲ್ಲಿ ಕೈ ಜೋಡಿಸಿ ಸದ್ಗುರು ಸಿದ್ಧಾರೂಢರ ಕೃಪಾಶೀರ್ವಾದಕ್ಕೆ ಪಾತ್ರರಾಗಿ ಎಂದು ಆಶೀರ್ವದಿಸಿದರು.

ಕಾರ್ಯಕ್ರಮದಲ್ಲಿ ಮುಧೋಳದ ಶ್ರೀ ಸಿದ್ಧಾರೂಢ ಮಠದ ಪೀಠಾಧಿಪತಿಗಳಾದ ಪ.ಪೂ ಸಿದ್ಧೇಶ್ವರ ಸ್ವಾಮೀಜಿ, ಹಾವೇರಿಯ ಡಾ. ನಾಗರಾಜ ರೊಟ್ಟಿ, ಶ್ರೀ ಸದ್ಗುರು ಈಶ್ವರಾನಂದಸ್ವಾಮಿ ಸೇವಾ ಟ್ರಸ್ಟ್‌ನ ಪದಾಧಿಕಾರಿಗಳು, ಶಿಷ್ಯವೃಂದ ಹಾಗೂ ಸುತ್ತಮುತ್ತಲಿನ ಸದ್ಭಕ್ತರು ಪಾಲ್ಗೊಂಡಿದ್ದರು. ಭಜನಾ ಹಾಗೂ ಪೂಜಾ ಕಾರ್ಯಕ್ರಮವನ್ನು ವಿರೂಪಾಕ್ಷಪ್ಪ ಕಾರ್ಮಾತಿ, ತುಕಾರಾಮ ಅಕಲ್ ಹಾಗೂ ಮಂಜುನಾಥ ಕೊಣಿಯವರು ನಡೆಸಿಕೊಟ್ಟರು. ಪ.ಪೂ ದಯಾನಂದ ಸ್ವಾಮಿಗಳು ಎಲ್ಲರನ್ನು ಸ್ವಾಗತಿಸಿದರೆ, ಮಂಜುನಾಥ ಹದ್ದಣ್ಣವರ ನಿರೂಪಿಸಿದರು. ಮೈಲಾರಪ್ಪ ಶೆಡ್ಡಿಯವರು ವಂದಿಸಿದರು.

# ಸಿದ್ದರಾಮಯ್ಯ ಬಿಜೆಪಿ ಸೇರಲು ಸಿದ್ಧವಾಗಿದ್ದರು: ಜಿಟಿಡಿ ಹೊಸ ಬಾಂಬ್

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

2006ರಲ್ಲಿ ಸಿದ್ದರಾಮಯ್ಯ ಅವರು ಬಿಜೆಪಿ ಪಕ್ಷ ಸೇರ್ಪಡೆಗೆ ಸಿದ್ಧವಾಗಿದ್ದರು ಎಂದು ಮಾಜಿ ಸಚಿವ ಹಾಗೂ ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ ದೇವೇಗೌಡ ಹೊಸ ಬಾಂಬ್ ಸಿಡಿಸಿದ್ದಾರೆ.

ಈ ಕುರಿತು ಖಾಸಗಿ ವಾಹಿನಿಯೊಂದಿಗೆ ಮಾತನಾಡಿದ ಅವರು, 2006ರ ಉಪಚುನಾವಣೆ ನಂತರ ವಿರೋಧ ಪಕ್ಷದ ನಾಯಕ ಮಾಡದಿದ್ರೆ ಬಿಜೆಪಿ ಸೇರ್ತಿದ್ರು. ಅದಕ್ಕಾಗಿಯೇ ಮಾಜಿ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಅವರ ಜೊತೆಗೆ ಕಾಗಿನೆಲೆಯಿಂದ ಸುತ್ತೂರಿ ಮಠಕ್ಕೆ ಬಂದಿದ್ರು ಎಂದು ಜಿ.ಟಿ ದೇವೇಗೌಡರು ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾಂಗ್ರೆಸ್ ಪಕ್ಷವನ್ನ ಸೀಮೆ ಎಣ್ಣೆ ಪಾರ್ಟಿ ಎಂದಿದ್ದರು. ಬಿಜೆಪಿ ಸೇರುವ ಕುರಿತು ಮೋದಿ ಅವರ ಜೊತೆಗೆ ಮಾತನಾಡಿದ್ದರು. ವಿರೋಧ ಪಕ್ಷದ ಸ್ಥಾನ ನೀಡದಿದ್ರೆ 100% ಸಿದ್ದರಾಮಯ್ಯ ಬಿಜೆಪಿಗೆ ಹೋಗುತ್ತಿದ್ದರು.

ರಾಜಕಾರಣದಲ್ಲಿ ಯಾವುದೂ ಶಾಶ್ವತವಲ್ಲ. ಆದರೆ, ಕಾಂಗ್ರೆಸ್‌ನವರು ಅಧಿಕಾರ ಶಾಶ್ವತ ಎಂದುಕೊಂಡಿದ್ದಾರೆ.

ಬಿಜೆಪಿಯನ್ನ ವಿರೋಧ ಮಾಡುತ್ತಾ ರಾಜಕಾರಣ ಮಾಡಿದರು, ನಾವು ಪೂರ್ಣ ಮನಸ್ಸಿನಿಂದ ಒಂದಾದ್ರೆ 25ಕ್ಕೂ ಹೆಚ್ಚು ಸ್ಥಾನವನ್ನ ಗೆಲ್ಲುತ್ತೇವೆ. ಕಾಂಗ್ರೆಸ್ ಪಕ್ಷವನ್ನ ಮೂರನೇ ಸ್ಥಾನಕ್ಕೆ ಉಳಿಸಬಹುದು. ಅಭ್ಯರ್ಥಿಗಳು ಯಾರು ಸಮರ್ಥರಿದ್ದಾರೆ ಎಂಬುದನ್ನ ಅಳೆದು ತೂಗಿ ಟಿಕೆಟ್ ಕೊಡಬೇಕು. ಆಗ 25ಕ್ಕೂ ಹೆಚ್ಚು ಸ್ಥಾನವನ್ನು ಬಿಜೆಪಿ ಹಾಗೂ ಜೆಡಿಎಸ್ ಗೆಲ್ಲುತ್ತದೆ ಎಂದು ಹೇಳಿದರು.

# ಗೌರಿ ಗಣೇಶ ಶಿಕ್ಷಣ ಸಂಸ್ಥೆಯಲ್ಲಿ ಶಿಕ್ಷಕರ ದಿನಾಚರಣೆ



■ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿನ ಗೌರಿ ಗಣೇಶ ಶಿಕ್ಷಣ ಸಂಸ್ಥೆಯಲ್ಲಿ ಸರ್ವಪಲ್ಲಿ ರಾಧಾಕೃಷ್ಣನ್‌ರವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಯಿತು.


ಸಂಸ್ಥೆಯ ಅಧ್ಯಕ್ಷ ಪ್ರಕಾಶ ಮ್ಯಾಗೇರಿ ಶಿಕ್ಷಕರ ದಿನಾಚರಣೆ ಆಚರಣೆಯ ಹಿನ್ನೆಲೆ, ಮಹತ್ವಗಳ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿ, ರಾಧಾಕೃಷ್ಣನ್‌ರವರು ಸೋವಿಯತ್ ಒಕ್ಕೂಟಕ್ಕೆ ಭಾರತದ ರಾಯಭಾರಿಯಾಗಿ ಸೇವೆ ಸಲ್ಲಿಸಿದರು. 1952ರಲ್ಲಿ ಅವರು ಭಾರತದ ಮೊದಲ ಉಪರಾಷ್ಟ್ರಪತಿಯಾಗಿ ಆಯ್ಕೆಯಾದರು. ರಾಷ್ಟ್ರಪತಿ ರಾಜೇಂದ್ರ ಪ್ರಸಾದ್ ಮತ್ತು ಪ್ರಧಾನ ಮಂತ್ರಿ ಜವಾಹರಲಾಲ್ ನೆಹರು ಅವರ ಅಡಿಯಲ್ಲಿ ಸೇವೆ ಸಲ್ಲಿಸಿದರು ಎಂದರು. ವಿದ್ಯಾರ್ಥಿಗಳಾದ ಪಲ್ಲವಿ ಮುದಗಲ್ಲ ಸ್ವಾಗತಿಸಿದರು. ಬಿಂದು ಬಿದರೂರ ಕಾರ್ಯಕ್ರಮ ನಿರೂಪಿಸಿದರು. ಜೈನಬಿ ನದಾಫ್ ಪ್ರಾಸ್ತಾವಿಕ ಭಾಷಣ ಮಾಡಿದರು. ಸಂಜನಾ ಕನಕಿ ವಂದಿಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ನಿರ್ದೇಶಕರಾದ ಶರಣಪ್ಪ ಅಣ್ಣಿಗೇರಿ, ಬಸವರಾಜ ಕುಂದಗೋಳ, ಶಾಲಾ ಮುಖ್ಯ ಶಿಕ್ಷಕಿ ಮೀನಾಕ್ಷಿ ಕೊಪ್ಪಳ, ಮಂಜುಳಾ ರಜಪೂತ, ಶಿಕ್ಷಕಿಯರಾದ ಕಮಲಾಕ್ಷಿ ಮಾರನಬಸರಿ, ಉಮಾ ಕೊಗ್ಗಾರಿ, ಲಕ್ಷ್ಮಿ ವಗ್ಗಾ, ಗುರುಬಸಮ್ಮಾ ನೀಲವಾನಿ, ಸರಸ್ವತಿ ಗುಗ್ಗರಿ, ಸವಿತಾ ದೇವದರ ಮುಂತಾದವರು ಉಪಸ್ಥಿತರಿದ್ದರು.

# ಕೆಂಚನಗೌಡ್ರ ನಿಧನದಿಂದ ಮನಸ್ಸಿಗೆ ನೋವಾಗಿದೆ: ಬಸವರಾಜ ಹೊರಟ್ಟಿ

■ವಿಜಯಸಾಕ್ಷಿ ಸುದ್ದಿ, ಗದಗ

ಮೂಲತಃ ರೋಣ ತಾಲೂಕಿನ ಹುಲ್ಲೂರು ಗ್ರಾಮದವರಾದ ಎಚ್.ವಿ ಕೆಂಚನಗೌಡ್ರ ಅವರ ನಿಧನದಿಂದ ಮನಸ್ಸಿಗೆ ಬಹಳಷ್ಟು ನೋವಾಗಿದೆ ಎಂದು ವಿಧಾನಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿರುವುದಾಗಿ ಅವ್ವ ಸೇವಾ ಟ್ರಸ್ಟ್‌ನ ಸಂಚಾಲಕ ಡಾ. ಬಸವರಾಜ ಧಾರವಾಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಿಕ್ಷಕರಾಗಿ, ಮುಖ್ಯ ಶಿಕ್ಷಕರಾಗಿ, ಸಂಘಟನಾ ಚತುರರಾಗಿ ಅವರು ಸಲ್ಲಿಸಿರುವ ಸೇವೆ ಅಮೋಘವಾಗಿದೆ. ಮಾಧ್ಯಮಿಕ ಶಾಲಾ ನೌಕರರ ಸಂಘದ ಸಂಘಟನೆಯಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಅವರು, ಸದಾ ಕ್ರಿಯಾಶೀಲ ವ್ಯಕ್ತಿಯಾಗಿದ್ದರು. ತಮ್ಮೊಂದಿಗೆ ಅತ್ಯಂತ ಆತ್ಮೀಯ ಒಡನಾಟವನ್ನು ಇಟ್ಟುಕೊಂಡಿದ್ದ ಒಬ್ಬ ಗೆಳೆಯನನ್ನು ಕಳೆದುಕೊಂಡು ತಾವು ಸಂಕಟವನ್ನು ಅನುಭವಿಸುತ್ತಿರುವುದಾಗಿ ಸಭಾಪತಿ ಹೊರಟ್ಟಿ ತಮ್ಮ ಸಂತಾಪ ಸೂಚಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಅನುದಾನಿತ ಶಾಲಾ ನೌಕರರಿಗೆ ಒಂದು ಪತ್ತಿನ ಸಹಕಾರಿ ಸಂಘವನ್ನು ಇಡೀ ಗದಗ ಜಿಲ್ಲೆಯಲ್ಲಿ ಓಡಾಡಿ ಅದನ್ನು ನನಸು ಮಾಡಿದ ಛಲವಂತ ಅವರು. ಇದರಿಂದ ಇಂದು ಅದೆಷ್ಟೋ ಶಿಕ್ಷಕರಿಗೆ, ನೌಕರರಿಗೆ ತಕ್ಷಣವೇ ಸಾಲ ದೊರೆತು ಅವರ ತೊಂದರೆಗಳನ್ನು ನಿವಾರಿಸಿಕೊಳ್ಳಲು ಸಹಕಾರಿಯಾಗಿದೆ. ದೂರದೃಷ್ಟಿಯ ಒಬ್ಬ ನಾಯಕನಾಗಿದ್ದ ಕೆಂಚನಗೌಡ್ರ ಇಂದು ನಮ್ಮೊಂದಿಗಿಲ್ಲ ಎಂದು ನಂಬುವುದೇ ಕಷ್ಟವಾಗಿದೆ ಎಂದು ಕೆಂಚನಗೌಡ್ರ ಅವರೊಂದಿಗಿನ ತಮ್ಮ ಒಡನಾಟದ ದಿನಗಳನ್ನು ಸಭಾಪತಿ ಬಸವರಾಜ ಹೊರಟ್ಟಿಯವರು ಮೆಲುಕು ಹಾಕಿದ್ದಾರೆ.

ಭಗವಂತನು ಅವರ ಕುಟುಂಬ ವರ್ಗದವರಿಗೆ ಈ ಅಗಲಿಕೆಯ ನೋವನ್ನು ಭರಿಸುವ ಶಕ್ತಿಯನ್ನು ನೀಡಲಿ. ಅವರ ನೋವಿನಲ್ಲಿ ನಾವೂ ಸಹ ಪಾಲುದಾರರಾಗಿದ್ದೇವೆ ಎಂದು ತಿಳಿಸಿರುವ ಸಭಾಪತಿ ಹೊರಟ್ಟಿಯವರು, ದಿವಂಗತ ಕೆಂಚನಗೌಡ್ರ ಅವರ ಆತ್ಮಕ್ಕೆ ಚಿರ ಶಾಂತಿ ಕೋರಿದ್ದಾರೆ.

## 'ಶರಣರ ಚಿಂತನೆ' ಪ್ರವಚನ ಕಾರ್ಯಕ್ರಮದಲ್ಲಿ ಹನುಮಂತ ಗುರೂಜಿ

# ಶಿಕ್ಷಕರ ಕಾಯಕಕ್ಕೆ ಸರಿಸಾಟಿಯಿಲ್ಲ



ಸನ್ಮಾನ ಸ್ವೀಕರಿಸಿ ಮಾತನಾಡಿದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯ ಕೆ.ಬಿ ಕೊಣ್ಣೂರು ಮಾತನಾಡಿ, ಮಕ್ಕಳ ಶಿಕ್ಷಣ ಅಭಿವೃದ್ಧಿಯಲ್ಲಿ ಶಿಕ್ಷಕರ ಪಾತ್ರ ಎಷ್ಟು ಮುಖ್ಯವಾಗಿರುತ್ತದೆಯೋ, ಪಾಲಕರ ಕರ್ತವ್ಯವೂ ಅಷ್ಟೇ ಮಹತ್ವದ್ದಾಗಿದೆ. ಮಕ್ಕಳ ತಪ್ಪನ್ನು ಎತ್ತಿ ತೋರಿಸುವುದಕ್ಕಿಂತ ಅವರಲ್ಲಿಯ ಜಾಣ್ಮೆಯ ಗುಣವನ್ನು ಗುರುತಿಸಿ ಪ್ರೋತ್ಸಾಹಿಸಿಬೇಕು. ಅಂದಾಗ ಮಾತ್ರ ಅವರ ಭವಿಷ್ಯವನ್ನು ರೂಪಸಿಸಲು ಸಾಧ್ಯವಾಗುತ್ತದೆ ಎಂದರು.

■ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ

ಆರೋಗ್ಯವಂತ ಸಮಾಜವನ್ನು ಕಟ್ಟಲು ಆದರ್ಶವಂತ ವ್ಯಕ್ತಿಗಳನ್ನು ತಯಾರು ಮಾಡುವ ಶಿಕ್ಷಕರ ಕಾಯಕಕ್ಕೆ ಈ ಜಗತ್ತಿನಲ್ಲಿ ಸರಿಸಾಟಿಯಾದ ಕಾಯಕ ಮತ್ತೊಂದಿಲ್ಲ ಎಂದು ಕಡ್ಲೂರು ಆಶ್ರಮದ ಹನುಮಂತ ಗೂರೂಜಿ ಅಭಿಪ್ರಾಯಪಟ್ಟರು.

ಇಲ್ಲಿಯ ಅನ್ನದಾನೀಶ್ವರ ಮಠದಲ್ಲಿ ಶ್ರಾವಣ ಮಾಸದ ಅಂಗವಾಗಿ ನಡೆಯುತ್ತಿರುವ ಶರಣರ ಚಿಂತನೆ ಪ್ರವಚನ ಕಾರ್ಯಕ್ರಮದಲ್ಲಿ ಶಿಕ್ಷಕರ ದಿನಾಚರಣೆಯ ಕಾರ್ಯಕ್ರಮದ ಸಾನ್ನಿಧ್ಯವನ್ನು ವಹಿಸಿ ಅವರು ಮಾತನಾಡಿದರು.

ಶಿಕ್ಷಕರು ನೀಡುವ ಶಿಕ್ಷಣದ ಮೌಲ್ಯಗಳು, ಆದರ್ಶಮಯ ನೀತಿ ಪಾಠಗಳು ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸುತ್ತವೆ. ಅವರು ಹಾಕಿಕೊಟ್ಟ ಮಾರ್ಗದರ್ಶನದಿಂದಲೇ ಇಂದು ಸರ್ ಎಂ ವಿಶ್ವೇಶ್ವರಯ್ಯನವರು, ರಾಷ್ಟ್ರಪತಿ ಅಬ್ದುಲ್ ಕಲಾಂರಂತಹ ಮಹಾನ್ ವಿಜ್ಞಾನಿಗಳು ಈ ಸಮಾಜಕ್ಕೆ ಕೊಡುಗೆಯಾದರು. ವೈಜ್ಞಾನಿಕವಾಗಿ ಮುಂದುವರೆದ ಇಂದಿನ ಕಾಲದಲ್ಲಿ ಹಲವು ಯಂತ್ರಗಳು ಕಾರ್ಯನಿರ್ವಹಿಸುತ್ತವೆ. ಅವುಗಳು ಕೆಟ್ಟರೆ ಮತ್ತೆ ರಿಪೇರಿ ಮಾಡುತ್ತೇವೆ. ಆದರೆ ಈ ಜೀವಂತ ಯಂತ್ರಗಳು ಈ ಜಗತ್ತನ್ನು ಬದಲಾವಣೆ ಮಾಡುವ ವ್ಯಕ್ತಿಗಳನ್ನು ರೂಪಿಸುವ ಶಿಕ್ಷಕರನ್ನು ಕೇವಲ ಸರಕಾರ ಮಾತ್ರ ಗೌರವಿಸುವುದಲ್ಲ, ಸಮಾಜದ ಪ್ರತಿಯೊಬ್ಬರೂ ಗೌರವಿಸಿ ಅವರ ಆರೋಗ್ಯದ ಕಡೆ ಗಮನವಿಡಬೇಕು ಎಂದು ಕಿವಿಮಾತು ಹೇಳಿದರು.

ಗ್ರಾ ಪಂ ಅಧ್ಯಕ್ಷ ಕೆ.ಎಸ್ ಪೂಜಾರ ಮಾತನಾಡಿದರು. ಶಿಕ್ಷಕರಾದ ಬಿ.ಎಸ್ ಕಣವಿ, ಸುರೇಶ ಹುಬ್ಬಳ್ಳಿ, ವೈ.ವೈ ಬೆಟಗೇರಿ, ಆರ್. ಆರ್ ಹೊನ್ನಳ್ಳಿ, ಅನ್ನದಾನೀಶ್ವರ ಸೇವಾ ಸಮಿತಿಯ ಅಧ್ಯಕ್ಷರಾದ ಮಾರ್ಕೇಂಡಪ್ಪ ಗಡ್ಡದ, ಗ್ರಾ ಪಂ ಸದಸ್ಯ ಮಹಾಂತೇಶ ಕಮತರ ವೇದಿಕೆಯಲ್ಲಿದ್ದರು. ಅಂಬರೀಶ ಕರೆಕಲ್ಲ ನಿರೂಪಿಸಿ ವಂದಿಸಿದರು.

# ನೂತನ ಮೇಯರ್, ಉಪಮೇಯರ್ ಆಯ್ಕೆ

■ವಿಜಯಸಾಕ್ಷಿ ಸುದ್ದಿ, ಮಂಗಳೂರು

ಮಂಗಳೂರು ಮಹಾನಗರ ಪಾಲಿಕೆಯ 24ನೇ ಅವಧಿಯ ಮೇಯರ್ ಹಾಗೂ ಉಪಮೇಯರ್ ಹುದ್ದೆಗೆ ನಡೆದ ಚುನಾವಣೆಯಲ್ಲಿ ಬಿಜೆಪಿಯ ಸುಧೀರ್ ಶೆಟ್ಟಿ ಮೇಯರ್ ಮತ್ತು ಉಪಮೇಯರ್ ಆಗಿ ಬಿಜೆಪಿಯ ಸುನಿತಾ ಆಯ್ಕೆಯಾಗಿದ್ದಾರೆ.

ಮಂಗಳಾ ಸಭಾಂಗಣದಲ್ಲಿ ಚುನಾವಣಾಧಿಕಾರಿ ಮೈಸೂರು ಉಪವಿಭಾಗದ ಪ್ರಾದೇಶಿಕ ಆಯುಕ್ತ ಡಾ. ಜಿ.ಸಿ ಪ್ರಕಾಶ್ ಚುನಾವಣೆ ನಡೆಸಿದರು.

ಈ ಅವಧಿಯ ನಾಲ್ಕನೇ ಮೇಯರ್ ಹುದ್ದೆ ಸಾಮಾನ್ಯ ವರ್ಗಕ್ಕೆ ಹಾಗೂ ಉಪಮೇಯರ್ ಹುದ್ದೆ ಪರಿಶಿಷ್ಟ ಜಾತಿ ಮಹಿಳೆಗೆ ಮೀಸಲಾಗಿತ್ತು.

ಪಾಲಿಕೆಯ ಒಟ್ಟು 60 ಸ್ಥಾನಗಳಲ್ಲಿ ಬಿಜೆಪಿ 44, ಕಾಂಗ್ರೆಸ್ 14 ಹಾಗೂ ಇಬ್ಬರು ಎಸ್‌ಡಿಪಿಐ ಸದಸ್ಯರು ಇದ್ದಾರೆ.

ಹಿಂದಿನ ಅವಧಿಯಲ್ಲಿ ಮಂಗಳೂರು ಉತ್ತರ ವಿಧಾನಸಭಾ ಕ್ಷೇತ್ರದ ಸದಸ್ಯರು ಮೇಯರ್ ಹುದ್ದೆಗೆ ಆಯ್ಕೆಯಾಗಿದ್ದರು.

ಈ ಬಾರಿ ಮಂಗಳೂರು ದಕ್ಷಿಣ ಕ್ಷೇತ್ರಕ್ಕೆ ಮೇಯರ್ ಹುದ್ದೆ, ಮಂಗಳೂರು ಉತ್ತರಕ್ಕೆ ಉಪಮೇಯರ್ ಹುದ್ದೆ ಸಿಕ್ಕಿದೆ.

## ನೀವೂ ನಮ್ಮ ಜೊತೆ ಕೈಜೋಡಿಸಿ

### 'ವಿಜಯಸಾಕ್ಷಿ'

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.

ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..

ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.

E-mail: vijayasakshidaily@gmail.com

ಮೊ : 9019256545

# ಜಿಲ್ಲೆಯನ್ನು ಮಾದಕ ದ್ರವ್ಯ ಮುಕ್ತವಾಗಿಸಲು ಪಣ

▶▶ ಮೊದಲನೇ ಪುಟದಿಂದ



ಗದಗ ಜಿಲ್ಲೆಯನ್ನು ಪ್ರವಾಸೋದ್ಯಮ ಜಿಲ್ಲೆಯನ್ನಾಗಿಸಬೇಕು. ಈ ನಿಟ್ಟಿನಲ್ಲಿ 2016-17ನೇ ಸಾಲಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬಜೆಟ್ ಮಂಡನೆಯಲ್ಲಿ ಲಕ್ಕುಂಡಿ ಪ್ರಾಧಿಕಾರಿ ರಚಿಸುವ ಕುರಿತು ಉಲ್ಲೇಖಿಸಿದ್ದರು. ಇಂದು ಲಕ್ಕುಂಡಿ ಪಾರಂಪರಿಕ ಅಭಿವೃದ್ಧಿ ಪ್ರಾಧಿಕಾರ ರಚಿಸಿ ಗದಗ ಜಿಲ್ಲಾ ಕೇಂದ್ರದ ಜಿಲ್ಲಾಡಳಿತ ಭವನದಲ್ಲಿ ಕಾರ್ಯಾಲಯ ಪುನರಾರಂಭ ಮಾಡಿದೆ. ಈ ಪ್ರಾಧಿಕಾರಕ್ಕೆ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿ ಕಾರ್ಯನಿರ್ವಹಿಸಲಿದ್ದಾರೆ. ಅಲ್ಲದೇ ಲಕ್ಕುಂಡಿ ಅಭಿವೃದ್ಧಿ ರಾಜ್ಯ ಸಲಹಾ ಸಮಿತಿ ರಚಿಸಲಾಗಿದ್ದು, ಸಮಿತಿಯ ಅಧ್ಯಕ್ಷರಾಗಿ ಪ್ರವಾಸೋದ್ಯಮ ಇಲಾಖೆ ಸಚಿವರು ಹಾಗೂ ಉಪಾಧ್ಯಕ್ಷರುಗಳಾಗಿ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಇರುವರು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಶಾಸಕ ಜಿ.ಎಸ್ ಪಾಟೀಲ, ಬೆಳಗಾವಿ ನರಗ ಪೊಲೀಸ್ ಆಯುಕ್ತ ಎಸ್.ಸಿದ್ದರಾಮಪ್ಪ, ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್ ನೇಮಗೌಡ ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಪತ್ತೆ ಮಾಡಲಾದ ಮೊಬೈಲ್ ಫೋನ್, ಆಭರಣಗಳನ್ನು ಮೂಲ ಮಾಲೀಕರಿಗೆ ಗೃಹ ಸಚಿವ ಡಾ. ಜಿ ಪರಮೇಶ್ವರ ಹಸ್ತಾಂತರಿಸಿದರು. ಥರ್ಡ್-ಐ ಅನುಷ್ಠಾನದಲ್ಲಿ ಕಾರ್ಯನಿರ್ವಹಿಸಿದ ಅಧಿಕಾರಿ, ಸಿಬ್ಬಂದಿಗಳಿಗೆ ಪ್ರಶಂಸನಾ ಪತ್ರ ವಿತರಿಸಿದರು.

## ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗದಿಂದ ಪ್ರಕಟಣೆ

# ಶಿರಹಟ್ಟಿ ತಾಲೂಕಿನ ಜಿ.ಪಂ, ತಾ.ಪಂ ಚುನಾಯಿತ ಸದಸ್ಯರ ಸಂಖ್ಯೆ ನಿಗದಿ

■ ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ ಸೆ.5ರಂದು ಶಿರಹಟ್ಟಿ ತಾಲೂಕಿನ ಜಿ.ಪಂ ಹಾಗೂ ತಾ.ಪಂ ಚುನಾಯಿತ ಸದಸ್ಯರ ಸಂಖ್ಯೆ ನಿಗದಿ ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿ ನಿರ್ಣಯ ಕುರಿತು ಪ್ರಕಟಣೆಯನ್ನು ಹೊರಡಿಸಿದ್ದು, ಅದರಂತೆ ಶಿರಹಟ್ಟಿ ತಾಲೂಕಿಗೆ 3 ಜಿ.ಪಂ ಕ್ಷೇತ್ರ ಹಾಗೂ 9 ತಾ.ಪಂ ಕ್ಷೇತ್ರಗಳ ಸದಸ್ಯರ ಸಂಖ್ಯೆ ಹಾಗೂ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳು ಪ್ರಾದೇಶಿಕ ಚುನಾವಣಾ ಕ್ಷೇತ್ರವ್ಯಾಪ್ತಿ ಎಂದು ಗುರುತಿಸಿದೆ.

ಶಿರಹಟ್ಟಿ ತಾಲೂಕಿಗೆ 3 ಜಿ.ಪಂ ಕ್ಷೇತ್ರಗಳು ಬರಲಿದ್ದು, **1) ಮಾಗಡಿ ಜಿ.ಪಂ ಕ್ಷೇತ್ರಕ್ಕೆ:** ಮಾಗಡಿ, ಹೊಳಲಾಪೂರ, ಪರಸಾಪೂರ, ಕಡಕೋಳ, ಹೊಸಳ್ಳಿ (ಮಜರೆ), ಜಲ್ಲಿಗೇರಿ, ಮಜ್ಜೂರ, ಶಿವಾಜಿನಗರ, ಕುಸಲಾಪೂರ, ರಣತೂರ, ದೇವಿಹಾಳ, ಛಬ್ಬಿ, ವರವಿ, ಗುಡ್ಡದಪುರ ಬರಲಿವೆ.





**2) ಬೆಳ್ಳಟ್ಟಿ ಜಿ.ಪಂ ಕ್ಷೇತ್ರಕ್ಕೆ :** ಬೆಳ್ಳಟ್ಟಿ, ನಾರಾಯಣಪೂರ, ಕೊಂಚಿಗೇರಿ, ಕೊಕ್ಕರಗುಂದಿ, ಬಿಜ್ಜೂರ, ಚಿಕ್ಕಸವಣೂರ, ಬೂದಿಹಾಳ, ಬನ್ನಿಕೊಪ್ಪ, ಸುಗ್ನಳ್ಳಿ, ಹಡಗಲಿ, ಮಾಚೇನಹಳ್ಳಿ, ಭಾವನೂರ, ತೆಗ್ಗಿನಭಾವನೂರ, ನವೇಭಾವನೂರ, **3) ಹೆಬ್ಬಾಳ ಜಿ.ಪಂ ಕ್ಷೇತ್ರಕ್ಕೆ:** ಹೆಬ್ಬಾಳ, ಚವಡಾಳ, ತೊಳಲಿ, ಕಲ್ಲಾಗನೂರ, ಇಟಗಿ, ಸಾಸರವಾಡ, ತಾರೀಕೊಪ್ಪ, ಕೆರಿಹಳ್ಳಿ, ಸೇವಾನಗರ, ವಡವಿ, ಹೊಸೂರ, ಅಲಗಿಲವಾಡ, ಬೆಳಗಟ್ಟಿ, ಕೋಗನೂರ, ತಂಗೋಡ, ಅಂಕಲಿ, ನಾಗಡಮಡುವು, ಗೋವನಕೊಪ್ಪ ಕನಕವಾಡ ಗ್ರಾಮಗಳು ಜಿ.ಪಂ ಪ್ರಾದೇಶಿಕ ಚುನಾವಣಾ ಕ್ಷೇತ್ರ ವ್ಯಾಪ್ತಿಯಾಗಿವೆ.

**ಶಿರಹಟ್ಟಿ ತಾಲೂಕಿಗೆ 9 ತಾ.ಪಂ ಕ್ಷೇತ್ರಗಳು:** ಮಾಗಡಿ ತಾ.ಪಂ ಕ್ಷೇತ್ರಕ್ಕೆ: 1) ಮಾಗಡಿ, ಹೊಳಲಾಪೂರ, ಪರಸಾಪೂರ, ಕಡಕೋಳ. **2) ಕಡಕೋಳ ತಾ.ಪಂ ಕ್ಷೇತ್ರಕ್ಕೆ:** ಕಡಕೋಳ, ಹೊಸಳ್ಳಿ (ಮಜರೆ), ಜಲ್ಲಿಗೇರಿ, ಮಜ್ಜೂರ, ಶಿವಾಜಿನಗರ, ಕುಸಲಾಪೂರ, 3) ರಣತೂರ ತಾ.ಪಂ ಕ್ಷೇತ್ರಕ್ಕೆ: ರಣತೂರ, ದೇವಿಹಾಳ, ಛಬ್ಬಿ, ವರವಿ, ಗುಡ್ಡದಪೂರ, **4) ಬೆಳ್ಳಟ್ಟಿ ತಾ.ಪಂ ಕ್ಷೇತ್ರಕ್ಕೆ:** ಬೆಳ್ಳಟ್ಟಿ, ನಾರಾಯಣಪೂರ, **5) ಕೊಂಚಿಗೇರಿ ತಾ.ಪಂ ಕ್ಷೇತ್ರಕ್ಕೆ:** ಕೊಂಚಿಗೇರಿ, ಕೊಕ್ಕರಗುಂದಿ, ಬಿಜ್ಜೂರ, ಚಿಕ್ಕಸವಣೂರ, ಬೂದಿಹಾಳ. **6) ಬನ್ನಿಕೊಪ್ಪ ತಾ.ಪಂ ಕ್ಷೇತ್ರಕ್ಕೆ:** ಬನ್ನಿಕೊಪ್ಪ, ಸುಗ್ನಳ್ಳಿ, ಹಡಗಲಿ, ಮಾಚೇನಹಳ್ಳಿ, ಭಾವನೂರ, ತೆಗ್ಗಿನಭಾವನೂರ, ನವೇಭಾವನೂರ, **7) ಹೆಬ್ಬಾಳ ತಾ.ಪಂ ಕ್ಷೇತ್ರಕ್ಕೆ:** ಹೆಬ್ಬಾಳ, ಚವಡಾಳ, ತೊಳಲಿ, ಕಲ್ಲಾಗನೂರ, ಇಟಗಿ, ಸಾಸರವಾಡ.

**8) ಸೇವಾನಗರ ತಾ.ಪಂ ಕ್ಷೇತ್ರಕ್ಕೆ:** ತಾರೀಕೊಪ್ಪ, ಕೆರಿಹಳ್ಳಿ, ಸೇವಾನಗರ, ವಡವಿ, ಹೊಸೂರ, ಅಲಗಿಲವಾಡ, ಬೆಳಗಟ್ಟಿ.

**9) ಕೋಗನೂರ ತಾ.ಪಂ ಕ್ಷೇತ್ರಕ್ಕೆ:** ಕೋಗನೂರ, ತಂಗೋಡ, ಅಂಕಲಿ, ನಾಗರಮಡುವು, ಗೋವನಕೊಪ್ಪ, ಕನಕವಾಡ ಗ್ರಾಮಗಳು ತಾ.ಪಂ ಪ್ರಾದೇಶಿಕ ಚುನಾವಣಾ ಕ್ಷೇತ್ರ ವ್ಯಾಪ್ತಿಯಾಗಿವೆ.

**ಆಕ್ಷೇಪಣೆ ಸಲ್ಲಿಸಲು ಸೆ.19ರವರೆಗೆ ಕಾಲಾವಕಾಶ:** ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ವ್ಯಾಪ್ತಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳಿದ್ದಲ್ಲಿ ಸೆ.19ರ ಸಂಜೆ 5ಗಂಟೆ ಒಳಗೆ ಆನ್‌ಲೈನ್ ವೆಬ್‌ಸೈಟ್ ವಿಳಾಸ: "https://rdpr.karnataka.gov.in/rdc/public/" ಮೂಲಕವಾಗಲಿ ಅಥವಾ ಖುದ್ದಾಗಿ/ಅಂಚೆಯ ಮೂಲಕ ವೆಬ್‌ಸೈಟ್‌ನ ಮುಖಪುಟದ ಎಡಭಾಗದಲ್ಲಿರುವ ಸಾರ್ವಜನಿಕ ಸಲಹೆಗಳು ಎಂಬ ಶೀರ್ಷಿಕೆಯನ್ನು ಕ್ಲಿಕ್ ಮಾಡಿ ಆಕ್ಷೇಪಣೆಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಬಹುದಾಗಿದೆ.

ಈ ಕುರಿತು ಪ್ರತಿಕ್ರಿಯಿಸಿದ ತಹಸೀಲ್ದಾರ ಅನಿಲ ಬಡಿಗೇರ, ಕರ್ನಾಟಕ ಪಂಚಾಯತರಾಜ್ ಸೀಮಾ ನಿರ್ಣಯ ಆಯೋಗವು ಸೆ.5ರಂದು ತಾಲೂಕಿನ ಜಿ.ಪಂ ಚುನಾಯಿತ ಸದಸ್ಯರ ಸಂಖ್ಯೆ ನಿಗದಿ ಹಾಗೂ ಪ್ರಾದೇಶಿಕ ಚುನಾಣಾ ಕ್ಷೇತ್ರಗಳ ಸೀಮಾ/ಗಡಿ ನಿರ್ಣಯಿಸುವುದಕ್ಕೆ ಪ್ರಕಟಣೆಯನ್ನು ಹೊರಡಿಸಿದ್ದು, ಇದಕ್ಕೆ ಆಕ್ಷೇಪಣೆ ಸಲ್ಲಿಸಲು ಸೆ.19ರ ಒಳಗೆ ಆಯೋಗದ ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಹಾಗೂ ಖುದ್ದಾಗಿ ಮತ್ತು ಅಂಚೆಯ ಮೂಲಕ ಸಲ್ಲಿಸಬಹುದಾಗಿದೆ ಎಂದಿದ್ದಾರೆ.

# ‘ಭಾರತ’ ಪುನರ್‌ನಾಮಕರಣ ವಿರೋಧಿಗಳು ವಿದೇಶಿ ಮನಸ್ಥಿತಿಯವರು

▶▶ ಮೊದಲನೇ ಪುಟದಿಂದ

‘ಇಂಡಿಯಾ’ ಎಂಬ ಹೆಸರನ್ನು ಅಳಿಸಿಹಾಕುವ ಮೂಲಕ ನಾವು ಸ್ವಾವಲಂಬಿ ಹಾಗೂ ದಾಸ್ಯಮುಕ್ತರು ಎನ್ನುವುದನ್ನು ಒತ್ತಿ ಹೇಳಬೇಕಿದೆ.

ಅವಕಾಶವಾದಿಗಳಾದ ಪ್ರತಿಪಕ್ಷಗಳೆಲ್ಲ ಸೇರಿಕೊಂಡು ತಮ್ಮ ಗುಂಪಿಗೆ ಇಂಡಿಯಾ ಎಂದು ಹೆಸರಿಟ್ಟುಕೊಂಡಿರುವುದು ಸಹ ವಿದೇಶಿ ಮನಸ್ಥಿತಿಯೇ ಆಗಿದ್ದು, ದೇಶವನ್ನು ಒಡೆದು ಆಳುವ ಇಂಗ್ಲೀಷರ ನೀತಿಯನ್ನು ಅನುಸರಿಸುತ್ತಿರುವ ಇಂಥವರಿಗೆ ಭಾರತ ಎಂಬ ಪದದ ಮಹತ್ವ ಗೊತ್ತಾಗುವುದಿಲ್ಲ. ಬಾಹ್ಯಾಕಾಶ, ಆರ್ಥಿಕತೆ, ವಿಶ್ವಶಾಂತಿ, ತಂತ್ರಜ್ಞಾನ, ವಿಪತ್ತು ನಿರ್ವಹಣೆ ಹೀಗೆ ಎಲ್ಲ ಕ್ಷೇತ್ರಗಳಲ್ಲಿಯೂ ತನ್ನದೇ ಛಾಪು ಮೂಡಿಸುತ್ತ ನಮ್ಮ ದೇಶ ಪ್ರಧಾನಿ ಮೋದಿಯವರ ನೇತೃತ್ವದಲ್ಲಿ ಅಭಿವೃದ್ಧಿಯ ಉತ್ತುಂಗ ತಲುಪುತ್ತಿದೆ ಎಂದಿದ್ದಾರೆ.

# ಬರಪೀಡಿತ ತಾಲೂಕು ಘೋಷಣೆಗೆ ಆಗ್ರಹ

▶▶ ಮೊದಲನೇ ಪುಟದಿಂದ

ಶ್ರಮ ಶಕ್ತಿ ಯೋಜನೆ, ಭೂ ಸಿರಿ ಯೋಜನೆಯನ್ನು ಕೈಬಿಟ್ಟು, ಎಪಿಎಂಸಿ ಕಾಯ್ದೆ ಹಿಂಪಡೆಯಲು ಹೊರಟಿರುವ ಕಾಂಗ್ರೆಸ್ ಸರಕಾರ ರೈತರ ಯೋಜನೆಗಳನ್ನು ರದ್ದುಪಡಿಸಿ ರೈತರ ವಿರೋಧಿ ನಿಲುವು ತಾಳುತ್ತಿರುವುದು ಖಂಡನೀಯ.

ಆದ್ದರಿಂದ ಈ ಕೂಡಲೇ ಸರಕಾರ ಯೋಜನೆಗಳನ್ನು ಮರು ಜಾರಿಗೊಳಿಸಿ ನಮ್ಮ ತಾಲೂಕನ್ನು ಬರಪೀಡಿತ ತಾಲೂಕು ಎಂದು ಘೋಷಣೆ ಮಾಡಲು ಆದ್ಯತೆ ನೀಡಬೇಕೆಂದು ಮನವಿ ಮೂಲಕ ಆಗ್ರಹಿಸಿದರು.

ಇದಕ್ಕೂ ಮುನ್ನ, ನೆಹರು ವೃತ್ತದಲ್ಲಿ ಬಿಜೆಪಿ ಪಕ್ಷದ ಕಾರ್ಯಕರ್ತರು ಕೆಲಕಾಲ ರಸ್ತೆ ತಡೆ ನಡೆಸಿ, ಚಕ್ಕಡಿಯನ್ನು ಏರಿ ಸರಕಾರದ ವಿರುದ್ಧ ಘೋಷಣೆ ಕೂಗುತ್ತಾ ತಹಸೀಲ್ದಾರ ಕಚೇರಿಗೆ ಆಗಮಿಸಿ ಮನವಿ ಸಲ್ಲಿಸಿದರು. ಜಾನು ಲಮಾಣಿ, ಪ್ರವೀಣಗೌಡ ಪಾಟೀಲ, ರಾಜೀವರೆಡ್ಡಿ ಬಮ್ಮನಕಟ್ಟಿ, ಶಂಕರ ಮರಾಠೆ, ಸಂತೋಷ ಓಬಾಜಿ, ರವಿ ಹಳ್ಳಿ, ಮಹೇಶ ಕಲ್ಲಪ್ಪನವರ, ಈರಣ್ಣ ಕಲ್ಯಾಣಿ, ದೇವಪ್ಪ ಕರಿಗಾರ, ಬಸವರಾಜ ನಾಯ್ಕರ, ವಸಂತ ಬಂಡಿವಡ್ಡರ, ಚನ್ನವೀರಪ್ಪ ಹೂಗಾರ, ದೇವರಾಜ ಮೇಟಿ, ಮಂಜುನಾಥಗೌಡ ಕೆಂಚನಗೌಡ್ರ, ಸುರೇಶ ಮಾಂಡ್ರೆ, ಬಸವರಾಜ ಪೂಜಾರ, ರಾಮನಗೌಡ ಪಾಟೀಲ ಮುಂತಾದವರು ಉಪಸ್ಥಿತರಿದ್ದರು.

# ಸೆ.16ರಂದು ಗಜೇಂದ್ರಗಡ ತಾಲೂಕು ಮಟ್ಟದ ದಸರಾ ಕ್ರೀಡಾಕೂಟ

■ ವಿಜಯಸಾಕ್ಷಿ ಸುದ್ದಿ, ಗದಗ

2023-24ನೇ ಸಾಲಿನಲ್ಲಿ ಗಜೇಂದ್ರಗಡ ತಾಲೂಕು ಮಟ್ಟದ ದಸರಾ ಕ್ರೀಡಾ ಕೂಟಗಳನ್ನು ಪುರುಷ ಹಾಗೂ ಮಹಿಳೆಯರಿಗೆ ಸೆಪ್ಟೆಂಬರ್ 16 ರಂದು ಎಸ್. ಎಮ್ ಭೂಮರಡ್ಡಿ ಪದವಿ ಪೂರ್ವ ಮಹಾವಿದ್ಯಾಲಯದ ಮೈದಾನ ಗಜೇಂದ್ರಗಡದಲ್ಲಿ ನಡೆಸಲಾಗುವುದು.

ಆಸಕ್ತ ಕ್ರೀಡಾಪಟುಗಳು ತಮ್ಮ ಹೆಸರನ್ನು ಸೆ.13 ರೊಳಗಾಗಿ ಸಹಾಯಕ ಯುವಜನ ಸೇವಾ ಮತ್ತು ಕ್ರೀಡಾಧಿಕಾರಿಗಳು, ಗಜೇಂದ್ರಗಡ ತಾಲೂಕು ಇವರಲ್ಲಿ ನೊಂದಾಯಿಸಿಕೊಳ್ಳುವುದು. ಸ್ಪರ್ಧೆಗಳನ್ನು ಸೆಪ್ಟೆಂಬರ್ 16 ರಂದು ಮುಂಜಾನೆ 9-00 ಗಂಟೆಗೆ ಉದ್ಘಾಟನೆ ಸಮಾರಂಭವನ್ನು ನಡೆಸಲಾಗುವುದು. ಸದರಿ ಉದ್ಘಾಟನಾ ಸಮಾರಂಭಕ್ಕೆ ಗಜೇಂದ್ರಗಡ ತಾಲೂಕಿನ ಆಸಕ್ತ ಕ್ರೀಡಾಪಟುಗಳು ಹಾಜರಿರುವುದು. ನೋಂದಾಯಿತ ಯುವಕ/ಯುವತಿ ಸಂಘಗಳು ಮಾತ್ರ ಗುಂಪು ಆಟಗಳಲ್ಲಿ ಭಾಗವಹಿಸಲು ಅವಕಾಶವಿದೆ. ಈ ಕೆಳಕಂಡಂತೆ ಕ್ರೀಡಾಕೂಟಗಳನ್ನು ಏರ್ಪಡಿಸಲಾಗುವುದು.

**ದಸರಾ ಕ್ರೀಡಾ ಕೂಟದ ಸ್ಪರ್ಧೆಗಳ ವಿವರ:**

**ಪುರುಷರಿಗಾಗಿ ಅಥ್ಲೆಟಿಕ್ಸ್ ಸ್ಪರ್ಧೆಗಳು:** 100ಮೀ. 200ಮೀ, 400ಮೀ. 800ಮೀ. 1500ಮೀ. 5000ಮೀ 10000ಮೀ

ಓಟ ಉದ್ದ ಜಿಗಿತ, ಎತ್ತರ ಜಿಗಿತ, ಟ್ರಿಪಲ್ ಜಂಪ್, ಗುಂಡು ಎಸೆತ ಜಾವಲಿನ ಎಸೆತ, ಚಕ್ರ ಎಸೆತ, 110ಮೀ ಹರ್ಡಲ್ಸ್, 4*100 ಮೀ. ರಿಲೇ, 4*400 ಮೀ. ರಿಲೇ

**ಗುಂಪು ಸ್ಪರ್ಧೆಗಳು**

ವಾಲಿಬಾಲ್, ಕಬಡ್ಡಿ, ಖೋ-ಖೋ, ಥ್ರೋ ಬಾಲ್, ಪುಟ್‌ಬಾಲ್, ಯೋಗ.

**ಮಹಿಳೆಯರಿಗಾಗಿ ಅಥ್ಲೆಟಿಕ್ಸ್:**

100ಮೀ. 200ಮೀ, 400ಮೀ. 800ಮೀ. 1500ಮೀ. 3000,ಮೀ ಓಟ ಉದ್ದ ಜಿಗಿತ, ಎತ್ತರ ಜಿಗಿತ, ಟ್ರಿಪಲ್ ಜಂಪ್, ಗುಂಡು ಎಸೆತ, ಜಾವಲಿನ ಎಸೆತ, ಚಕ್ರ ಎಸೆತ, 100ಮೀ ಹರ್ಡಲ್ಸ್, 4*100 ಮೀ. ರಿಲೇ, 4*400 ಮೀ. ರಿಲೇ.

**ಗುಂಪು ಸ್ಪರ್ಧೆಗಳು:**

ವಾಲಿಬಾಲ್, ಕಬಡ್ಡಿ, ಖೋ-ಖೋ, ಥ್ರೋ ಬಾಲ್, ಯೋಗ

ಗಜೇಂದ್ರಗಡ ತಾಲೂಕು ಮಟ್ಟದ ದಸರಾ ಕ್ರೀಡಾಕೂಟದಲ್ಲಿ ಭಾಗವಹಿಸುವ ಕ್ರೀಡಾಪಟುಗಳು ಗಜೇಂದ್ರಗಡ ತಾಲೂಕಿನವರೇ ಆಗಿರಬೇಕು. ಹಾಗೂ ಆಧಾರ ಕಾರ್ಡ್ ಅಥವಾ ಗ್ರಾಮ ಪಂಚಾಯತಿಯ ರಹವಾಸಿ ಪತ್ರ ಸದರಿ ದಿನದಂದು ಹಾಜರಪಡಿಸುವುದು. ನೋಂದಾಯಿತ ಯುವಕ/ಯುವತಿ ಸಂಘಗಳು ಮಾತ್ರ ಗುಂಪು ಆಟಗಳಲ್ಲಿ ಭಾಗವಹಿಸಲು ಅವಕಾಶವಿದೆ. ಹೆಚ್ಚಿನ ಮಾಹಿತಿಗಾಗಿ ಎಚ್.ಆರ್ ನಿಡಗುಂದಿ, ಸಹಾಯಕ ಯುವಜನ ಸೇವಾ ಮತ್ತು ಕ್ರೀಡಾಧಿಕಾರಿಗಳು, ಗಜೇಂದ್ರಗಡ ಮೋ.ದೂರವಾಣಿಸಂ. 8861748571 ಮೂಲಕ ಸಂಪರ್ಕಿಸಬಹುದಾಗಿದೆ.

# ಸ್ವ-ಸಹಾಯ ಗುಂಪು ಸದಸ್ಯರ ನೇಮಕಾತಿಗಾಗಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

2 ವರ್ಷಗಳವರೆಗೆ ನರೇಗಲ್ಲ ಪಟ್ಟಣ ಪಂಚಾಯತಿ ಜೊತೆ-ಗೆ ಪೂರ್ಣಾವಧಿಗೆ ಐಇಸಿ ಚಟುವಟಿಕೆಗಳನ್ನು ಕೈಗೊಳ್ಳಲು ತಮ್ಮ ಆಸಕ್ತಿಯುನ್ನು ವ್ಯಕ್ತಪಡಿಲು NULM-Day/NRLM/NGO ಅಡಿಯಲ್ಲಿ ನೋಂದಾಯಿತ SHG/NGO ಸದಸ್ಯರಿಂದ ಗದಗ ಜಿಲ್ಲೆಯ ನರೇಗಲ್ಲ ಪಟ್ಟಣ ಪಂಚಾಯತಿಯ ಆಸಕ್ತಿಯ ಅಭಿವ್ಯಕ್ತಿಯನ್ನು ಆಹ್ವಾನಿಸುತ್ತದೆ. ಆಯ್ಕೆ ಪ್ರಕ್ರಿಯೆ ಮತ್ತು ಗೌರವಧನಕ್ಕೆ ಸಂಬಂಧಿಸಿದ ವಿವರಗಳನ್ನು http://naregaltown.mrc.gov.in ವೈಬ್‌ಸೈಟ್‌ನಲ್ಲಿ ನೋಡಬಹುದು.

NULM/Day/NRLM/NGO ಯೊಂದಿಗೆ ನೋಂದಾಯಿಸಿಕೊಂಡ ಆಸಕ್ತ ಖಊಉು/ಓಉಔ ಸದಸ್ಯರು ತಮ್ಮ ಆಸಕ್ತಿಯ ಅಭಿವ್ಯಕ್ತಿಯನ್ನು NULM-Day/NRLM ಹಿಂಬರದೊಂದಿಗೆ ಮೇಲೆ ತಿಳಿಸಲಾದ ವೈಬ್‌ಸೈಟ್‌ನಲ್ಲಿ ಲಭ್ಯವಿರುವ ನಿಗದಿತ ನಮೂನೆಯಲ್ಲಿ ಸೆಪ್ಟೆಂಬರ್ 16 ಸಂಜೆ 5 ಗಂಟೆಯೊಳಗಾಗಿ ka.naregal.tp@gmail.com ಗೆ ಕಳುಹಿಸಬಹುದಾಗಿದೆ.

# ಶ್ರಾವಣ ಮಾಸ ನಿಮಿತ್ತ ಅನ್ನಸಂತರ್ಪಣೆ



■ ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಪಟ್ಟಣದ ದುರ್ಗಾ ವೃತ್ತದಲ್ಲಿ ಶ್ರಾವಣ ಮಾಸದ ಪ್ರಯುಕ್ತ ಶುಕ್ರವಾರ ದುರ್ಗಾದೇವಿ ದೇವಸ್ಥಾನದಲ್ಲಿ ಸಾಮೂಹಿಕ ಅನ್ನ ಸಂತರ್ಪಣೆ ಕಾರ್ಯಕ್ರಮ ನಡೆಯಿತು.

ಈ ವೇಳೆ ವರ್ತಕರಾದ ನಾಗರಾಜ ಸವದಿ, ಪ್ರಹ್ಲಾದ ಚುಂಚಾ ಮಾತನಾಡಿ, ಒತ್ತಡದ ಬದುಕಿನಲ್ಲಿ ಜನರು ಧರ್ಮ ಕಾರ್ಯ ಕಡಿಮೆ ಮಾಡುತ್ತಿದ್ದಾರೆ. ಇದರಿಂದ ನೆಮ್ಮದಿ ಕಡಿಮೆಯಾಗುತ್ತಿದೆ. ಧಾರ್ಮಿಕ ಕಾರ್ಯಕ್ರಮಗಳಿಗೆ ನಾವು ಸಮಯವನ್ನು ಮೀಸಲಿಡಬೇಕಿದೆ. ನಿತ್ಯದ ಬದುಕಿನಲ್ಲಿ ಹಣ ಗಳಿಸುವುದು ಮಾತ್ರ ಜೀವನ ಎಂದುಕೊಂಡಿದ್ದೇವೆ. ಆದರೆ ಶಾಸ್ತ್ರ, ವೇದ ಹಾಗೂ ಪುರಾಣದಲ್ಲಿ ಹೇಳಿರುವಂತೆ ಸ್ವಲ್ಪ ಹಣವನ್ನು ಸಾಮಾಜಿಕ ಕಾರ್ಯಗಳಿಗೆ ಬಳಸಬೇಕು ಎಂಬುದಿದೆ. ಎಲ್ಲರ ಬದುಕಿನಲ್ಲಿ ಎದುರಾಗುವ ಸಮಸ್ಯೆಗಳಿಗೆ ಭಕ್ತಿ ಮಾರ್ಗದ ಮೂಲಕ ಸಮಸ್ಯೆಗಳಿಗೆ ಪರಿಹಾರ ಸಿಗಲಿದೆ ಎಂದರು.

ಈ ವೇಳೆ ನಾಗರಾಜ ಕುಂಬಾರ, ಮೆಹಬೂಬ ಟೇಲರ್, ತಾಯಪ್ಪ ಮ್ಯಾಕಲ್, ಲಕ್ಷ್ಮಣ ಶೀಂಗ್ರಿ, ಗಣೇಶ ಪವಾರ, ಈರಣ್ಣ ಹುಬ್ಬಳ್ಳಿ, ಗುಲಾಂ ಹುನಗುಂದ, ಪ್ರದೀಪ ಅಕ್ಕಸಾಲಿಗರ, ಪ್ರಕಾಶ ಅಕ್ಕಸಾಲಿಗರ, ನಂದೀಶ ಸಂಚಾಲಿ, ಪವನ ಬಾಂಢಗೆ ಸೇರಿ ದುರ್ಗಾ ಸರ್ಕಲ್‌ನ ವ್ಯಾಪಾರಸ್ಥರು ಭಾಗವಹಿಸಿದ್ದರು.

# ರೈತರು ಕಣ್ಣೀರಲ್ಲಿ ಕೈ ತೊಳೆಯುವಂತಾಗಿದ್ದರೂ ಗಮನಿಸುತ್ತಿಲ್ಲ



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಬರಗಾಲ ನಿರ್ವಹಣೆ, ವಿದ್ಯುತ್ ಸಮಸ್ಯೆ, ರೈತರ ಯೋಜನೆಗಳನ್ನು ಕೈಬಿಟ್ಟಿರುವದನ್ನು ಖಂಡಿಸಿ ಪಟ್ಟಣದ ತಹಸೀಲ್ದಾರ ಕಚೇರಿ ಎದುರಿನಲ್ಲಿ ಶಿರಹಟ್ಟಿ ಮಂಡಳ ರೈತ ಮೋರ್ಚಾ ಬಿಜೆಪಿ ವತಿಯಿಂದ ಪ್ರತಿಭಟನೆ ನಡೆಸಿ ತಹಸೀಲ್ದಾರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ಈ ವೇಳೆ ಮಾತನಾಡಿದ ಬಿಜೆಪಿ ಮಂಡಳ ಅಧ್ಯಕ್ಷ ಫಕ್ಕೀರೇಶ ರಟ್ಟಿಹಳ್ಳಿ, ರೈತ ಮೋರ್ಚಾ ಜಿಲ್ಲಾ ಉಪಾಧ್ಯಕ್ಷ ಡಿ.ವೈ ಹುನಗುಂದ, ರಾಜ್ಯ ಕಾಂಗ್ರೆಸ್ ಸರಕಾರ ಗ್ಯಾರಂಟಿ ಯೋಜನೆಗಳ ಹೆಸರಲ್ಲಿ ಅಧಿಕಾರಕ್ಕೆ ಬಂದು ಈಗ ಅಧಿಕಾರ ನಿರ್ವಹಿಸುವಲ್ಲಿ ಸಂಪೂರ್ಣ ವಿಫಲವಾಗಿದೆ. ರಾಜ್ಯ ಸರಕಾರ ಎಲ್ಲ ಕಾಮಗಾರಿಗಳಲ್ಲಿ ಕಮಿಷನ್, ವರ್ಗಾವಣೆಯನ್ನು ದಂಧೆ ಮಾಡಿಕೊಂಡು ಭ್ರಷ್ಟಾಚಾರಕ್ಕೆ ಮುಂದಾಗಿದೆ. ರೈತರು ಕಣ್ಣೀರಲ್ಲಿ ಕೈ ತೊಳೆಯುವಂತಾಗಿದ್ದರೂ ಬರಗಾಲ ಘೋಷಣೆಗೆ ಹಿಂದೇಟು ಹಾಕುತ್ತಿದೆ. ರಾಜ್ಯದ ಹಲವಾರು ತಾಲೂಕುಗಳಲ್ಲಿ ಅದರಲ್ಲೂ ಬಿಜೆಪಿ ಶಾಸಕರು ಆಯ್ಕೆಯಾದ ಕ್ಷೇತ್ರಗಳಲ್ಲಿ ಬರಗಾಲ ಘೋಷಣೆ ಮಾಡದಿರುವದಕ್ಕೆ ಕಾರಣವೇನು ಎಂದು ಪ್ರಶ್ನಿಸಿದರು.

ರಾಜ್ಯದಲ್ಲಿ ನೂರಾರು ಸಮಸ್ಯೆಗಳು ತಾಂಡವವಾಡುತ್ತಿದ್ದರೂ ಕಾಂಗ್ರೆಸ್ 100 ದಿನಗಳ ಆಡಳಿತದಲ್ಲಿ ಐದು ಗ್ಯಾರಂಟಿಗಳನ್ನು ತೋರಿಸುತ್ತಿದೆ ಎಂದು ಟೀಕಿಸಿದರು. ಕೂಡಲೇ ಹಿಂದಿನ ಸರಕಾರದ ಕೈಬಿಡಲಾದ ಯೋಜನೆಗಳನ್ನು ಮರುಜಾರಿಗೆ ತರಬೇಕು. ಲಕ್ಷ್ಮೇಶ್ವರ ತಾಲೂಕನ್ನು ಬರ ಪ್ರದೇಶವೆಂದು ಘೋಷಣೆ ಮಾಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಹಿರಿಯ ಮುಖಂಡರಾದ ಶರಣು ಅಂಗಡಿ, ಪ್ರ.ಕಾರ್ಯದರ್ಶಿ ಬಸವರಾಜ ಇಟಗಿ, ತಾಲೂಕಾಧ್ಯಕ್ಷ ಮಂಜುನಾಥಗೌಡ ಕೆಂಚನಗೌಡ್ರ, ಜಾನು ಲಮಾಣಿ, ಸೋಮೇಶ ಉಪನಾಳ, ಗಂಗಾಧರ ಮೆಣಸಿನಕಾಯಿ, ದುಂಡೇಶ ಕೊಟಗಿ, ನಿಂಗಪ್ಪ ಪ್ಯಾಟಿ, ಮುತ್ತಣ್ಣ ಚೋಟಗಲ್, ಅಶೋಕ ಶಿರಹಟ್ಟಿ, ನಿಂಬಣ್ಣ ಮಡಿವಾಳರ, ಪ್ರವೀಣ ಬೋಮಲೆ, ಅನಿಲ ಮುಳಗುಂದ, ದೇವೆಂದ್ರಪ್ಪ, ರವಿಕುಮಾರ ಕೋರಿ, ಹಾಲಪ್ಪ ಸೂರಣಗಿ, ಅಶೋಕ ಸೂರಣಗಿ, ಸಿ.ಎನ್ ಹೂಗಾರ, ಸಿ.ಎಸ್ ಹುನಗುಂದ, ಎಂ.ಎಸ್ ಅಳ್ಳಳ್ಳಿ, ಬಿ.ಎಂ ಬಾಳಿಕಾಯಿ, ಬಸವರಾಜ ಕಲ್ಲೂರ ಸೇರಿದಂತೆ ಅನೇಕರಿದ್ದರು.

# ನಾನು ಹೆಮ್ಮೆಯ ಹಿಂದೂ: ಬ್ರಿಟನ್ ಪ್ರಧಾನಿ ರಿಷಿ ಸುನಕ್

■ ವಿಜಯಸಾಕ್ಷಿ ಸುದ್ದಿ, ನವದೆಹಲಿ

ಸೆಪ್ಟೆಂಬರ್ 9-10ರಂದು ದೆಹಲಿಯಲ್ಲಿ ನಡೆಯಲಿರುವ ಜಿ-20 ಶೃಂಗಸಭೆಯಲ್ಲಿ ಭಾಗವಹಿಸಲು ಭಾರತಕ್ಕೆ ಆಗಮಿಸಿರುವ ಯುಕೆ ಪ್ರಧಾನಿ ರಿಷಿ ಸುನಕ್ ಅವರು ಹಲವು ಪ್ರಮುಖ ವಿಚಾರಗಳನ್ನು ಹಂಚಿಕೊಂಡಿದ್ದಾರೆ. ನಾನು ಹೆಮ್ಮೆಯ ಹಿಂದೂ, ಮತ್ತು ನಾನು ಬೆಳೆದದ್ದು ಹೀಗೆ. ನಾನು ಹೀಗೇ ಇದ್ದೇನೆ. ಒಂದೆರಡು ದಿನಗಳಲ್ಲಿ ಇಲ್ಲಿರುವಾಗ ಮಂದಿರಕ್ಕೆ ಭೇಟಿ ನೀಡಬಹುದು. ನಾವು ರಕ್ಷಾ ಬಂಧನವನ್ನು ಆಚರಿಸುತ್ತೇವೆ, ಆದ್ದರಿಂದ ನನ್ನ ಸಹೋದರಿ ಮತ್ತು ನನ್ನ ಸೋದರ ಸಂಬಂಧಿಗಳು ಕಟ್ಟಿರುವ ಎಲ್ಲಾ ರಾಖಿಗಳು ನನ್ನ ಬಳಿ ಇವೆ. ಇನ್ನೊಂದು ದಿನ ಜನ್ಮಾಷ್ಟಮಿಯನ್ನು ಸರಿಯಾಗಿ ಆಚರಿಸಲು ನನಗೆ ಸಮಯವಿರಲಿಲ್ಲ ಎಂದು ಅವರು ಹೇಳಿದರು. ನಾವು ಈ ಬಾರಿ ಮಂದಿರಕ್ಕೆ ಭೇಟಿ ನೀಡಿದರೆ ನಾನು ಅದನ್ನು ಸರಿದೂಗಿಸಬಹುದು ಎಂದುಕೊಳ್ಳುತ್ತೇನೆ. ನಂಬಿಕೆಯು ತಮ್ಮ ಜೀವನದಲ್ಲಿ ನಂಬಿಕೆಯನ್ನು ಹೊಂದಿರುವ ಪ್ರತಿಯೊಬ್ಬರಿಗೂ ಸಹಾಯ ಮಾಡುತ್ತದೆ ಎಂದು ನಾನು ಭಾವಿಸುತ್ತೇನೆ. ವಿಶೇಷವಾಗಿ, ನೀವು ಈ ಒತ್ತಡದ ಕೆಲಸಗಳನ್ನು ಹೊಂದಿರುವಾಗ ನಿಮಗೆ ನೆಮ್ಮದಿ ನೀಡಲು, ನಿಮಗೆ ಶಕ್ತಿಯನ್ನು ನೀಡಲು ನಂಬಿಕೆಯನ್ನು ಹೊಂದಿರುವುದು ಮುಖ್ಯವಾಗಿದೆ ಎಂದು ಅವರು ಹೇಳಿದರು.

# ಬಸವರಾಜ ಯರಗುಪ್ಪಿಗೆ ‘ಆದರ್ಶ ಶಿಕ್ಷಕ ರತ್ನ’ ಪ್ರಶಸ್ತಿ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಕರ್ನಾಟಕ ರಾಜ್ಯ ಶಿಕ್ಷಕರ ಸಾಹಿತ್ಯ ಪರಿಷತ್ತು(ರಿ) ರಾಜ್ಯ ಘಟಕ ಬೆಂಗಳೂರು, ಲಯನ್ಸ್ ಕ್ಲಬ್ ಆಫ್ ಕೆಜಿಎಫ್ ಗೋಲ್ಡ್ ಮೈನ್ಸ್ ಹಾಗೂ ಸ್ವರ್ಣ ಭೂಮಿ ಫೌಂಡೇಶನ್ ಕರ್ನಾಟಕ ಇವರು ಕೊಡಮಾಡುವ ರಾಜ್ಯ ಮಟ್ಟದ ‘ಡಾ ಸರ್ವಪಲ್ಲಿ ರಾಧಾಕೃಷ್ಣನ್ ಆದರ್ಶ ಶಿಕ್ಷಕ ರತ್ನ’ ಪ್ರಶಸ್ತಿಗೆ ಶಿರಹಟ್ಟಿ ತಾಲೂಕು ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಬಸವರಾಜ ಎಮ್.ಯರಗುಪ್ಪಿ ಭಾಜನರಾಗಿದ್ದಾರೆ.



16 ವರ್ಷಗಳ ಶಿಕ್ಷಣ ಸೇವೆಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಸೇವೆ ಸಲ್ಲಿಸಿದ ಇವರು, 2018-19ನೇ ಸಾಲಿನ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪಡೆದಿದ್ದಾರೆ. ಸದ್ಯ ಬಿಆರ್‌ಸಿ ಕೇಂದ್ರದ ಸಂಪನ್ಮೂಲ ವ್ಯಕ್ತಿಯಾಗಿ, ಮಕ್ಕಳ ಮತ್ತು ಸಮುದಾಯದ ಒಡನಾಡಿಗಳಾಗಿ ಸಾಮಾಜಿಕ ಜಾಲತಾಣಗಳ ಮೂಲಕ ಜ್ಞಾನ ದಾಸೋಹ ನೀಡುತ್ತಿರುವ ಇವರ ಸೇವಾ ಕಾರ್ಯಗಳನ್ನು ಪರಿಗಣಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಸೆ.10ರಂದು ಕೋಲಾರದಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಸ್ವೀಕರಿಸಲಿದ್ದಾರೆ.







ಗದಗ ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ತೆರೆಯಲಾದ ಮಾಹಿತಿ ಕೋಶ ಹಾಗೂ ಚಿತ್ರಪಟಗಳನ್ನು ಗೃಹ ಸಚಿವರಾದ ಡಾ.ಜಿ.ಪರಮೇಶ್ವರ ಅವರು ವೀಕ್ಷಿಸಿದರು. ಗದಗ ಜಲ್ಲಾ ಉಸ್ತುವಾರಿ ಸಚಿವರಾದ ಡಾ.ಎಚ್.ಕೆ.ಪಾಟೀಲ ಹಾಗೂ ಜಿಲ್ಲಾಧಿಕಾರಿಗಳು ಮಾಹಿತಿ ಕೋಶದ ಕಾರ್ಯವಿಧಾನದ ಕುರಿತು ವಿವರಿಸಿದರು.


**ಪುರಸಭೆ ಕಾರ್ಯಾಲಯ, ರೋಣ ಜಿ: ಗದಗ, ಕರ್ನಾಟಕ-582209**

ದೂರವಾಣಿ : 08381-267234 Email: itstaff_ulb_ron@yahoo.in

Website : www.ronatown.mrc.gov.in

ಕ್ರ.ಸಂ/ಪುಸರೋ/ಜಾ.ಮಂ/ವಹಿ/30/2023-24 ದಿನಾಂಕ : 08-09-2023

**ಸಾರ್ವಜನಿಕ ಪ್ರಕಟಣೆ**

**ಕರ್ನಾಟಕ ಕಾಯ್ದೆ 1965 ರ 39ನೇ ನಿಯಮ**

**(ಅಧಿಕಾರಿಗಳ ಮಾರ್ಗದರ್ಶನ ಹಾಗೂ ನಕಲು ಮಂಜೂರಾತಿ ಇತ್ಯಾದಿ)**

ಯಾವತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಕಾಣಿಸಿದ ಪುರಸಭೆ ಮಾಲ್ಕಿ ಆಸ್ತಿಯನ್ನು ಮಂಜೂರ ಮಾಡಲು ತೀರ್ಮಾನಿಸಿರುತ್ತದೆ. ಈ ಕುರಿತು ಯಾವುದೇ ತಕರಾರು ವ ಆಕ್ಷೇಪಣೆ ಇದ್ದಲ್ಲಿ 30 (ಮೂವತ್ತು) ದಿವಸಗಳಲ್ಲಿ ಲೇಖಿ ಮೂಲಕ ಸಲ್ಲಿಸಬೇಕು. ತಪ್ಪಿದಲ್ಲಿ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲ. ಅಂತಾ ಸೂಕ್ತ ಕ್ರಮ ಜರುಗಿಸಲಾಗುವುದು ತಿಳಿಯಿರಿ.

| ಅ.ನಂ. | ಆಸ್ತಿ ವಿವರ | ಉದ್ದೇಶ |
|---|---|---|
| 1 | ನಾಗರಿಕ ಸೌಲಭ್ಯದಲ್ಲಿ ಕಾಯ್ದಿರಿಸಿದ ಜಾಗೆಯು ರಿ.ಸ.ನಂ. 495/1ಎ+495/7-1ಎ1 +495/1ಎ/2 ಮು.ಕ.ನಂ. 3328/72 ಕ್ಷೇತ್ರ 1359 ಚ.ಮೀ | ವಿಶ್ವ ಕಟ್ಟಡ & ಇತರೆ ನಿರ್ಮಾಣ ಕಾರ್ಮಿಕರ ಸಂಘ (ರಿ) ರೋಣ ಇವರಿಗೆ ಸಭೆ ಮತ್ತು ಸಮಾರಂಭ ಮಾಡಿಕೊಳ್ಳಲು ಕಟ್ಟಡ ಕುರಿತು. |

ಸಹಿ/- ಮುಖ್ಯಾಧಿಕಾರಿಗಳು, ಪುರಸಭೆ ರೋಣ

ಸಹಿ/- ಆಡಳಿತಾಧಿಕಾರಿಗಳು ಹಾಗೂ ಉಪವಿಭಾಗಾಧಿಕಾರಿಗಳು ಪುರಸಭೆ ರೋಣ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/171/2023-24

# ಅ.01ರಂದು ವಿಶ್ವ ಹಿರಿಯ ನಾಗರಿಕರ ದಿನಾಚರಣೆ




■ವಿಜಯಸಾಕ್ಷಿ ಸುದ್ದಿ, ಗದಗ

ವಿಶ್ವ ಹಿರಿಯ ನಾಗರಿಕರ ದಿನಾಚರಣೆಯನ್ನು ಅಕ್ಟೋಬರ್ 1 ರಂದು ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಬೆ 11 ಗಂಟೆಗೆ ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಪಿ.ವೈ. ಶೆಟ್ಟೆಪ್ಪನವರ ತಿಳಿಸಿದರು.

ಗದಗ ಜಿಲ್ಲಾ ಪಂಚಾಯತ್ ಸಭಾಂಗಣದ ವಿಡಿಯೋ ಕಾನ್ಫರೆನ್ಸ್ ಹಾಲ್‌ದಲ್ಲಿ ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಕುರಿತು ಜರುಗಿದ ಪೂರ್ವಭಾವಿ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಅವರು ಮಾತನಾಡಿದರು.

ವಿಶ್ವ ಹಿರಿಯ ನಾಗರಿಕರ ದಿನಾಚರಣೆಯ ದಿನದಂದು ಎಲ್ಲ ಹಿರಿಯ ನಾಗರಿಕರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕು. ದಿನಾಚರಣೆಯ ಪ್ರಯುಕ್ತ ಹಿರಿಯ ನಾಗರಿಕರಿಗೆ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಸ್ಪರ್ಧೆಗಳಲ್ಲಿಯೂ ಸಹ ಹಿರಿಯ ನಾಗರಿಕರು ಭಾಗವಹಿಸಬೇಕು. ಕಾರ್ಯಕ್ರಮದಲ್ಲಿ 80 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು ಯಾವುದಾದರೂ ಕ್ಷೇತ್ರದಲ್ಲಿ ಸಾಧನೆ ಮಾಡಿದವರಿಗೆ ಸನ್ಮಾನ ಮಾಡಲಾಗುವುದು. ಈ ಕುರಿತು ಪ್ರಸ್ತಾವನೆಯನ್ನು ವಿಕಲಚೇತನರ ಮತ್ತು ಹಿರಿಯ ನಾಗರಿಕರ ಇಲಾಖೆಯ ಕಚೇರಿಗೆ ಸಲ್ಲಿಸಬೇಕು. ಕಾರ್ಯಕ್ರಮಕ್ಕೆ ಗಣ್ಯರನ್ನು / ಅಧಿಕಾರಿಗಳನ್ನು, ಸ್ಥಳೀಯ ಜನಪ್ರತಿನಿಧಿಗಳನ್ನು ಆಹ್ವಾನಿಸಲಾಗುವುದು ಎಂದು ಪಿ.ವೈ.ಶೆಟ್ಟೆಪ್ಪನವರ ತಿಳಿಸಿದರು.

ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಕೆ. ಮಹಾಂತೇಶ ಮಾತನಾಡಿ, ವಿಶ್ವ ಹಿರಿಯ ನಾಗರಿಕರ ದಿನಾಚರಣೆಯ ಪ್ರಯುಕ್ತ ಸೆಪ್ಟೆಂಬರ್ 26 ರಂದು ಬೆ 9 ಗಂಟೆಗೆ ನಗರದ ಕೆ.ಎಚ್.ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಕ್ರೀಡಾ ಸ್ಪರ್ಧೆಗಳನ್ನು ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳನ್ನು ಏರ್ಪಡಿಸಲಾಗುವುದು. ಕ್ರೀಡಾ ಸ್ಪರ್ಧೆಗಳನ್ನು ಪುರುಷರು ಹಾಗೂ ಮಹಿಳೆಯರಿಗಾಗಿ 60 ರಿಂದ 69 ವರ್ಷ , 70 ರಿಂದ 79 ವರ್ಷ ಹಾಗೂ 80 ವರ್ಷ ಮೇಲ್ಪಟ್ಟು ಹೀಗೆ ಮೂರು ವಿಭಾಗಗಳನ್ನಾಗಿ ಮಾಡಲಾಗಿದೆ. ಕ್ರೀಡಾಸ್ಪರ್ಧೆಗಳಾದ ನಡಿಗೆ, ರಿಂಗ್‌ನ್ನು ಬಕೆಟ್‌ನಲ್ಲಿ ಎಸೆಯುವುದು, ಮ್ಯೂಸಿಕಲ್ ಚೇರ್ ಕ್ರೀಡೆಗಳನ್ನು ಆಯೋಜಿಸಲಾಗುವುದು. ಸಾಂಸ್ಕೃತಿಕ ಸ್ಪರ್ಧೆಗಳಾದ ಏಕಪಾತ್ರ ಅಭಿನಯ, ಗಾಯನ ಸ್ಪರ್ಧೆ, ಚಿತ್ರಕಲೆ ಸ್ಪರ್ಧೆಗಳನ್ನು ಆಯೋಜಿಸಲಾಗುವುದು ಎಂದು ಸಭೆಗೆ ತಿಳಿಸಿದರು.

ಸಭೆಯಲ್ಲಿ ಶಿಷ್ಟಾಚಾರದನ್ವಯ ಆಮಂತ್ರಣ ಪತ್ರಿಕೆ ಮುದ್ರಣ, ವೇದಿಕೆ ವ್ಯವಸ್ಥೆ , ಊಟ/ ಉಪಹಾರ ವ್ಯವಸ್ಥೆ , ಬಹುಮಾನ ವಿತರಣೆ , ತುರ್ತು ವೈದ್ಯಕೀಯ ವ್ಯವಸ್ಥೆ ಕುರಿತು ಚರ್ಚಿಸಲಾಯಿತು.

ಸಭೆಯಲ್ಲಿ ಯುವಜನಸೇವಾ ಮತ್ತು ಕ್ರೀಡಾ ಇಲಾಖೆಯ ಅಧಿಕಾರಿ ಶರಣು ಗೋಗೇರಿ, ನಿವೃತ್ತ ನೌಕರರ ಸಂಘ ಹಾಗೂ ಹಿರಿಯ ನಾಗರಿಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು , ಸದಸ್ಯರು , ನಿವೃತ್ತ ನೌಕರರ ಸಂಘದ ಅಧ್ಯಕ್ಷರು, ಕಾರ್ಯದರ್ಶಿಗಳು, ವೃದ್ಧಾಶ್ರಮದ ಮುಖ್ಯಸ್ಥರು ಹಾಗೂ ಸಿಬ್ಬಂದಿಗಳು, ಸಹಾಯವಾಣಿ ಕೇಂದ್ರದ ಸಿಬ್ಬಂದಿಗಳು, ಇಲಾಖೆಯ ಎಂ.ಆರ್.ಡಬ್ಲ್ಯು ಕಾರ್ಯಕರ್ತರು, ಹಿರಿಯ ನಾಗರಿಕರು, ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

# ಉದ್ದಿಮೆ ಪರವಾನಿಗೆ ಕಡ್ಡಾಯ

■ವಿಜಯಸಾಕ್ಷಿ ಸುದ್ದಿ, ಗದಗ

ಸಮಸ್ತ ಅಂಗಡಿ, ವ್ಯಾಪಾರ, ಉದ್ದಿಮೆ ಹಾಗೂ ಇತರ ವಹಿವಾಟು ನಡೆಸುವ ಮಾಲೀಕರುಗಳಿಗೆ ತಿಳಿಯಪಡಿಸುವುದೆನೆಂದರೆ, ಕರ್ನಾಟಕ ಪುರಸಭೆಗಳ ಅಧಿನಿಯಮದ ಅಡಿಯಲ್ಲಿ ಯಾವುದೇ ಅಂಗಡಿ ವ್ಯಾಪಾರ, ಉದ್ದಿಮೆ ಹಾಗೂ ಇತರೆ ವಹಿವಾಟು ನಡೆಸುತ್ತಿದ್ದಲ್ಲಿ ಪರವಾನಗಿ ಪಡೆಯುವುದು ಕಡ್ಡಾಯವಾಗಿದೆ.

ಲೈಸನ್ಸ್ ಪಡೆದವರು 2022-23ನೇ ಸಾಲಿನ ಚಾಲ್ತಿ ಅವಧಿ ಮುಗಿದಿರುತ್ತದೆ. ಆದರೂ ವ್ಯಾಪಾರಸ್ಥರು ತಮ್ಮ ಲೈಸನ್ಸ್ ಗಳನ್ನು ಇನ್ನೂವರೆಗೂ ನವೀಕರಿಸಿಕೊಂಡಿರುವುದಿಲ್ಲ. 2023-24ನೇ ಚಾಲ್ತಿ ಸಾಲಿನ ವರ್ಷವು ಅವಧಿಯು ದಿ:31-03-2024 ರಂದು ಮುಗಿಯಲಿದ್ದು, ನವೀಕರಿಸಿಕೊಳ್ಳಬೇಕು.

ಅನಧಿಕೃತವಾಗಿ ವ್ಯಾಪಾರ ಹಾಗೂ ಉದ್ದಿಮೆ ಮತ್ತು ಇತರೆ ವಹಿವಾಟು ಮಾಡುವ ವ್ಯಾಪಾರಸ್ತರು ಲೈಸನ್ಸ್ ಪಡೆಯದೆ ಇದ್ದವರು ಸೂಕ್ತ ದಾಖಲೆಗಳಾದ ಉತಾರ, ಸನ್ 2023-24ರ ಕಂದಾಯ ತುಂಬಿದ ರಶೀದಿ, ಆಧಾರ ಕಾರ್ಡ್ ಅಥವಾ ಗುರುತಿನ ಚೀಟಿ, ಭಾಡಿಗೆ ಕರಾರು ಪತ್ರ, ಝರಾಕ್ಸ್ ಪ್ರತಿಗಳು ಹಾಗೂ ಪಾಸ್ ಪೋರ್ಟ್ ಸೈಜ್ ಪೋಟೋ, ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿ ದಿನಾಂಕ:31-03-2024ರ ರೊಳಗಾಗಿ ವ್ಯಾಪಾರ ವಹಿವಾಟು ಮಾಡಲು ಆನ್‌ಲೈನ್ ತಂತ್ರಾಂಶದ ಮೂಲಕ ಸೃಜಿಸಿದ ಡಿಜಿಟಲ್ ಸಹಿಯುಳ್ಳ ಉದ್ದಿಮೆ ಪರವಾನಿಗೆ ಪತ್ರವನ್ನು ಕಡ್ಡಾಯವಾಗಿ ಪಡೆದುಕೊಂಡು ವ್ಯಾಪಾರವನ್ನು ಮಾಡಬಹುದಾಗಿದೆ. ತಪ್ಪಿದಲ್ಲಿ ಕರ್ನಾಟಕ ಪುರಸಭಾ ಅಧಿನಿಯಮದನ್ವಯ ದಂಡ ವಿಧಿಸುವುದಲ್ಲದೆ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲು ಮಾಡಲಾಗುವುದು.

ಇಂತಹ ಅಹಿತಕರ ಘಟನೆಗಳಿಗೆ ಅವಕಾಶ ಕಲ್ಪಿಸದೆ ಸಮಸ್ತ ಅಂಗಡಿ, ವ್ಯಾಪಾರ, ಉದ್ದಿಮೆ ಹಾಗೂ ಇತರೆ ಪರವಾನಿಗೆಯನ್ನು 2023-24ನೇ ಸಾಲಿನವರೆಗೆ ನವೀಕರಿಸಿಕೊಳ್ಳಬೇಕು. ಅನಧಿಕೃತವಾಗಿ ವ್ಯಾಪಾರ ಹಾಗೂ ಉದ್ದಿಮೆ ಮತ್ತು ಇತರೆ ವಹಿವಾಟು ಮಾಡುವ ವ್ಯಾಪಾರಸ್ತರು, ಲೈಸನ್ಸ್ ಪಡೆದು ವ್ಯಾಪಾರ ಮಾಡಿಕೊಳ್ಳಬೇಕು ಎಂದು ಗದಗ-ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ ರೈತ ಮೋರ್ಚಾ ಪ್ರತಿಭಟನೆ

# ಸರ್ಕಾರ ರೈತರ ಬೆನ್ನು ಮುರಿಯುವ ಕೆಲಸ ಮಾಡುತ್ತಿದೆ

■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ರಾಜ್ಯದ ಕಾಂಗ್ರೆಸ್ ಸರ್ಕಾರದ ವಿರುದ್ಧ ಶುಕ್ರವಾರ ಬಿಜೆಪಿ ರೈತ ಮೋರ್ಚಾ ಕರೆ ನೀಡಿದ್ದ ಪ್ರತಿಭಟನೆಯ ಹಿನ್ನೆಲೆಯಲ್ಲಿ ಶುಕ್ರವಾರ ಪಟ್ಟಣದ ಕೆ.ಕೆ ವೃತ್ತದಲ್ಲಿ ರೈತರು ಹಾಗೂ ಬಿಜೆಪಿ ಮುಖಂಡರು ಪ್ರತಿಭಟನೆ ನಡೆಸಿದರು.

ರೈತರ ಹಿತದೃಷ್ಟಿಯಿಂದ ಜಾರಿಗೆ ತಂದಿದ್ದ ರೈತಪರವಾದ ಕಾನೂನು ಹಾಗೂ ಯೋಜನೆಗಳನ್ನು ಕಾಂಗ್ರೆಸ್ ನೇತೃತ್ವದ ಸರ್ಕಾರ ರದ್ದು ಮಾಡುವ ಮೂಲಕ ರೈತರ ಬೆನ್ನು ಮುರಿಯುವ ಕೆಲಸ ಮಾಡುತ್ತಿದೆ. ನಾವು ನುಡಿದಂತೆ ನಡೆಯುತ್ತಿದ್ದೇವೆ ಎಂದು ಹೇಳುವ ಕಾಂಗ್ರೆಸ್ ನಾಯಕರು ರೈತರ ಹಾಗೂ ಅವರ ಮಕ್ಕಳ ಭವಿಷ್ಯವನ್ನು ಸುಭದ್ರಗೊಳಿಸುವ ಯೋಜನೆಗಳನ್ನು ನಿಲ್ಲಿಸಿದೆ. ಕಾಂಗ್ರೆಸ್‌ನ ರೈತವಿರೋಧಿ ನೀತಿಗಳಿಂದ ಈಗಾಗಲೇ ರಾಜ್ಯದಲ್ಲಿ 80ಕ್ಕೂ ಅಧಿಕ ರೈತರ ಆತ್ಮಹತ್ಯೆಗಳು ನಡೆದಿವೆ ಎಂಬ ವರದಿಗಳಿವೆ ಎಂದು ದೂರಿದ ಪ್ರತಿಭಟನಾಕಾರರು, ರೈತರ ಆರ್ಥಿಕ ಪ್ರಗತಿಗಾಗಿ ಜಾರಿಗೆ ತಂದಿರುವ ಕಿಸಾನ್ ಸಮ್ಮಾನ್ ಯೋಜನೆಗೆ ಹಿಂದಿನ ಬಿಜೆಪಿ ಸರ್ಕಾರವು ಅಂದಾಜು 51 ಲಕ್ಷ ರೈತರಿಗೆ ವಾರ್ಷಿಕ ಎರಡು ಕಂತುಗಳಲ್ಲಿ ನೀಡುತ್ತಿದ್ದ 4 ಸಾವಿರ ರೂ. ಕಿಸಾನ್ ಸಮ್ಮಾನ್ ನಿಧಿ ಹಣವನ್ನು ಕಾಂಗ್ರೆಸ್ ತಡೆಹಿಡಿದಿದೆ ಎಂದು ಪ್ರತಿಭಟನಾಕಾರರು ಆಕ್ರೋಶವ್ಯಕ್ತಪಡಿಸಿದರು.

ಮಾಜಿ ಸಚಿವ ಕಳಕಪ್ಪ ಬಂಡಿ, ವೀರಪ್ಪ ಪಟ್ಟಣಶೆಟ್ಟಿ, ಕನಕಪ್ಪ ಅರಳಿಗಿಡದ, ಪುರಸಭೆ ಮಾಜಿ ಉಪಾಧ್ಯಕ್ಷ ಬಸವರಾಜ ಬಂಕದ, ರಾಂಪೂರ ಗ್ರಾ.ಪಂ ಮಾಜಿ ಅಧ್ಯಕ್ಷ ಶಿವರಾಜಗೌಡ ಗೌಡರ, ಬಾಳಾಜಿರಾವ್ ಬೋಸಲೆ, ಮುಖಂಡರಾದ ಮುತ್ತಣ್ಣ ಕಡಗದ, ಅಶೋಕ ವನ್ನಾಲ, ರವಿ ದಂಡಿನ, ಉಮೇಶ ಚನ್ನುಪಾಟೀಲ, ಮುದಿಯಪ್ಪ ಮುಧೋಳ, ಸುಭಾಸ ಮ್ಯಾಗೇರಿ, ಲೀಲಾ ಸವಣೂರ, ಉಮೇಶ ಮಲ್ಲಾಪೂರ, ದುರಗಪ್ಪ ಮುಧೋಳ, ಡಿ.ಜಿ ಕಟ್ಟಿಮನಿ, ಮಲ್ಲು ಮಾದರ, ಶಂಕರ ಇಂಜನಿ, ಶಿವಾನಂದ ಅರಳಿ, ಸಂಜೀವಕುಮಾರ ದೇಸಾಯಿ, ಸೂಗಿರಪ್ಪ ಕಾಜಗಾರ ಮುಂತಾದವರಿದ್ದರು.




ಪಟ್ಟಣದ ಉಣಚಗೇರಿ ಗ್ರಾಮದ ರೈತರು ದಿನದ 24 ತಾಸು ವಿದ್ಯುತ್ ಪೂರೈಕೆ ಮಾಡಬೇಕು ಎಂದು ಹೋರಾಟ ನಡೆಸುತ್ತಿದ್ದವರಿಗೆ ನಾನು ಶಾಸಕನಾದರೆ 24 ಗಂಟೆಗಳಲ್ಲಿ ರೈತರಿಗೆ 24 ತಾಸು ವಿದ್ಯುತ್ ಪೂರೈಸಲು ಮುಂದಾಗುತ್ತೇನೆ ಎಂದ್ದಿದ್ದವರು ಇಂದು ಶಾಸಕರಾಗಿ ನೂರಕ್ಕೂ ಅಧಿಕ ದಿನಗಳು ಗತಿಸಿವೆ. ಆದರೆ ಉಣಚಗೇರಿ ಗ್ರಾಮದ ರೈತರಿಗೆ ಮಾತ್ರ ನಿರಂತರ ವಿದ್ಯುತ್ ಪೂರೈಸಲು ಸಾಧ್ಯವಾಗುತ್ತಿಲ್ಲ. ಕಾಂಗ್ರೆಸ್ ಅಧಿಕಾರಕ್ಕೆ ಬಂದು ಇಷ್ಟು ದಿನ ಕಳೆದಿವೆ, ಅಂದಿನ ಹೋರಾಟಗಾರರು ಹಾಗೂ ಶಾಸಕರು ಮಾತ್ರ ರೈತರ ವಿದ್ಯುತ್ ಸಮಸ್ಯೆಗೆ ಪರಿಹಾರ ನೀಡಲು ಮುಂದಾಗುತ್ತಿಲ್ಲ ಎಂದು ಕಾಂಗ್ರೆಸ್ ನಾಯಕರ ವಿರುದ್ಧ ಬಿಜೆಪಿ ಮುಖಂಡರು ಹರಿಹಾಯ್ದರು.

# ರೈತರಿಗಾಗುತ್ತಿರುವ ಮೋಸ ತಪ್ಪಿಸಲು ಮನವಿ

■ವಿಜಯಸಾಕ್ಷಿ ಸುದ್ದಿ, ಗದಗ

ತಾಲೂಕಿನಲ್ಲಿ ಸೋಲಾರ್ ವಿದ್ಯುತ್, ಪವನ ವಿದ್ಯುತ್ ಕಂಪನಿಯವರು ರೈತರಿಗೆ ಮೋಸ ಮಾಡುತ್ತಿದ್ದು, ಅಂಥವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಕರ್ನಾಟಕ ರಕ್ಷಣಾ ವೇದಿಕೆ ಮುಂಡರಗಿ ತಾಲೂಕು ಘಟಕದ ಅಧ್ಯಕ್ಷ ಸಿದ್ದಪ್ಪ ನಿ.ಮದ್ಲಾಪೂರ ನೇತೃತ್ವದಲ್ಲಿ ಗದಗ ಜಿಲ್ಲಾಧಿಕಾರಿಗಳ ಮುಖಾಂತರ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಸಿದ್ದಪ್ಪ ಮುದ್ಲಾಪೂರ ಮಾತನಾಡಿ, ಕಂಪನಿಯವರು ರೈರಿಂದ ಸಂಪೂರ್ಣ ಜಮೀನನ್ನು ಮೋಸದಿಂದ ಖರೀದಿಗೆ ಪಡೆದುಕೊಳ್ಳುತ್ತಿದ್ದಾರೆ. ನಂತರ ಸದರ ಜಮೀನಿನಲ್ಲಿ ಕೇವಲ ಒಂದು ಫ್ಯಾನ್ ಅಥವಾ ಸೋಲಾರ್ ಘಟಕಗಳನ್ನು ಸ್ಥಾಪಿಸಿ ಉಳಿದ ಜಮೀನಿಗೆ ಪ್ರತಿ ಎಕರೆಗೆ ಒಂದು ವರ್ಷಕ್ಕೆ ಕೇವಲ 30 ಸಾವಿರ ರೂ.ಗಳನ್ನು ಮಾತ್ರ ಪರಿಹಾರ ನೀಡುತ್ತಾ ಬಂದಿದ್ದು, ರೈತರಿಗೆ ತಿಳಿಯದಂತೆ ಮೋಸ ಮಾಡುತ್ತಿದ್ದಾರೆ ಎಂದರು.

ಸದರಿಯವರು ಖರೀದಿಸಿದ ಜಮೀನುಗಳು ದಸ್ತಾವೇಜುಗಳನ್ನು ಆಂಗ್ಲಭಾಷೆಯಲ್ಲಿ ಬೆರಳಚ್ಚು ಮಾಡಿಸುತ್ತಿದ್ದು, ಮುಗ್ಧ ರೈತರಿಗೆ ಮೋಸವಾಗುತ್ತಿದೆ. ಇಂಥವರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಂಡು ಈಗಾಗಲೇ ನೋಂದಣಿ ಮಾಡಿಸಿರುವ ದಸ್ತಾವೇಜುಗಳನ್ನು ರದ್ದುಪಡಿಸಿ ರೈತರಿಗೆ ನ್ಯಾಯ ಕೊಡಿಸಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಗವಿಶಿದ್ದಪ್ಪ ಜ.ಆಲೂರ, ಬಸವರಾಜ ಹೊನ್ನಪ್ಪಗೌಡ ರಡ್ಡೇರ, ಬಸವರಾಜ ಬಾವಿ, ಮಲ್ಲೇಶ ಭಜಂತ್ರಿ, ಸೇರಿದಂತೆ ಅನೇಕ ರೈತರು ಉಪಸ್ಥಿತರಿದ್ದರು.

## ನಿಧನ ವಾರ್ತೆ

### ಹನಮಪ್ಪ ಬಿಸನಳ್ಳಿ



**ಗದಗ:** ತಾಲೂಕಿನ ತಿಮ್ಮಾಪೂರ ಗ್ರಾಮದ ನಿವಾಸಿ ಹನುಮಪ್ಪ ದೊಡ್ಡಜವಳೆಪ್ಪ ಬಿಸನಳ್ಳಿ (71) ಶುಕ್ರವಾರ ಮಧ್ಯಾಹ್ನ 3-30ಕ್ಕೆ ನಿಧನರಾಗಿದ್ದಾರೆ. ಮೃತರ ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ 12-30ಕ್ಕೆ ತಿಮ್ಮಾಪೂರ ಗ್ರಾಮದಲ್ಲಿ ನೆಡೆಯುವುದು. ಮೃತರು ಪತ್ನಿ, ಮಕ್ಕಳು, ಮೊಮ್ಮಕ್ಕಳು ಹಾಗೂ ಅಪಾರ ಬಂಧು- ಬಳಗವನ್ನು ಅಗಲಿದ್ದಾರೆ.

# ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ನೂತನ ಕಾರ್ಯಾಲಯ ಉದ್ಘಾಟನೆ



■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಪ್ರವಾಸೋದ್ಯಮ ಇಲಾಖೆ ಸಹಯೋಗದಲ್ಲಿ ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ನೂತನ ಕಾರ್ಯಾಲಯವನ್ನು ಜಿಲ್ಲಾಡಳಿತ ಭವನದಲ್ಲಿ ಶುಕ್ರವಾರದಂದು ಉದ್ಘಾಟಿಸಲಾಯಿತು.

ಗೃಹ ಸಚಿವರಾದ ಡಾ.ಜಿ.ಪರಮೇಶ್ವರ ಹಾಗೂ ರಾಜ್ಯದ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಶಾಸಕರಾದ ಜಿ.ಎಸ್.ಪಾಟೀಲ, ವಿಧಾನ ಪರಿಷತ ಸದಸ್ಯ ಎಸ್.ವಿ.ಸಂಕನೂರ, ಜಿಲ್ಲಾಧಿಕಾರಿ ವೈಶಾಲಿ.ಎಂ.ಎಲ್, ಬೆಳಗಾವಿ ನಗರ ಪೊಲೀಸ್ ಆಯುಕ್ತ ಎಸ್.ಸಿದ್ದರಾಮಪ್ಪ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ, ಜಿಲ್ಲಾ ಪಂಚಾಯತ ಮಾಜಿ ಅಧ್ಯಕ್ಷರಾದ ವಾಸಣ್ಣ ಕುರಡಗಿ, ಸಿದ್ದು ಪಾಟೀಲ, ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಸದಸ್ಯರುಗಳು ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿಗಳು ಹಾಜರಿದ್ದರು.

## ನಾಳೆ ಶ್ರೇಷ್ಠ ಉದ್ಯಮಿ, ವರ್ತಕ ಪ್ರಶಸ್ತಿ ಪ್ರದಾನ

# ಇಂದಿನಿಂದ ಸೆ. 13ರವರೆಗೆ 'ಗದಗ ಉತ್ಸವ- 2023'

■ವಿಜಯಸಾಕ್ಷಿ ಸುದ್ದಿ, ಗದಗ




ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆ, ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ, ಗ್ರಾಮೀಣ ಮತ್ತು ಸಣ್ಣ ಉದ್ಯಮ ವಿಭಾಗ (ಖಾಗ್ರಾ), ಜಿಲ್ಲಾ ಪಂಚಾಯತ್ ಸಂಯುಕ್ತ ಆಶ್ರಯದಲ್ಲಿ ಕೈಗಾರಿಕಾ ವಸ್ತು ಪ್ರದರ್ಶನ ಹಾಗೂ ಮಾರಾಟದ 'ಗದಗ ಉತ್ಸವ-2023' ಹಮ್ಮಿಕೊಳ್ಳಲಾಗಿದೆ ಎಂದು ಕೈಗಾರಿಕಾ ವಸ್ತು ಪ್ರದರ್ಶನ ಸಮಿತಿ ಚೇರಮನ್ ಚಂದ್ರು ಬಾಳಿಹಳ್ಳಿಮಠ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ತೋಂಟದಾರ್ಯ ಕಲ್ಯಾಣ ಕೇಂದ್ರದಲ್ಲಿ ಸೆ.9 ರಂದು ಸಾಯಂಕಾಲ 4.30ಕ್ಕೆ ಜ.ಡಾ. ತೋಂಟದ ಸಿದ್ಧರಾಮ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಕಾರ್ಯಕ್ರಮ ಉದ್ಘಾಟಿಸುವರು. ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, ಸಂಸದ ಶಿವಕುಮಾರ ಉದಾಸಿ, ಪಿ.ಸಿ. ಗದ್ದಿಗೌಡ್ರ, ವಿಧಾನ ಪರಿಷತ್ ಸದಸ್ಯ ಪ್ರದೀಪ ಶೆಟ್ಟರ, ಸಲೀಂ ಅಹ್ಮದ, ಎಸ್.ವಿ. ಸಂಕನೂರ, ಶಾಸಕ ಸಿ.ಸಿ. ಪಾಟೀಲ, ಜಿ.ಎಸ್. ಪಾಟೀಲ, ವಿಪ ಸದಸ್ಯ ಎಸ್.ವಿ.ಸಂಕನೂರ, ಡಾ.ಚಂದ್ರು ಲಮಾಣಿ, ಗದಗ-ಬೆಟಗೇರಿ ನಗರಸಭೆ ಅಧ್ಯಕ್ಷೆ ಉಷಾ ದಾಸರ, ಉಪಾಧ್ಯಕ್ಷೆ ಸುನಂದಾ ಬಾಕಳೆ, ಬೆಂಗಳೂರಿನ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ಆಯುಕ್ತೆ ಕೃಷ್ಣ ಗುಂಜನ ಆಗಮಿಸುವರು.

ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆ ಅಧ್ಯಕ್ಷ ಮದುಸೂಧನ ಪುಣೇಕರ ಅಧ್ಯಕ್ಷತೆ ವಹಿಸುವರು ಎಂದರು.

**ಶ್ರೇಷ್ಠ ಉದ್ಯಮಿ, ವರ್ತಕ ಪ್ರಶಸ್ತಿ**

ಸೆ.10ರಂದು ಸಾಯಂಕಾಲ 5ಕ್ಕೆ ನಡೆಯುವ ಸಮಾರಂಭದಲ್ಲಿ ಹೊಸಳ್ಳಿ ಸಂಸ್ಥಾನ ಮಠದ ಜ.ಅಭಿನವ ಬೂದೀಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ, ಸಣ್ಣ ಕೈಗಾರಿಕೆ, ಸಾರ್ವಜನಿಕ ಉದ್ದಿಮೆಗಳ ಇಲಾಖೆ ಸಚಿವ ಶರಣಬಸಪ್ಪ ದರ್ಶನಾಪೂರ, ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ ಅಧ್ಯಕ್ಷ ಬಿ.ವಿ. ಗೋಪಾಲರಡ್ಡಿ, ವಾಣಿಜ್ಯೋದ್ಯಮ ಸಂಸ್ಥೆ ಅಧ್ಯಕ್ಷ ವಿನಯ ಜವಳಿ, ವಾಣಿಜ್ಯ ಮತ್ತು ತೆರಿಗೆ ಇಲಾಖೆ ಆಯುಕ್ತೆ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸಿ.ಶಿಖಾ ಆಗಮಿಸುವರು. ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆ ಅಧ್ಯಕ್ಷ ಮದುಸೂಧನ ಪುಣೇಕರ ಅಧ್ಯಕ್ಷತೆ ವಹಿಸುವರು. ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆ ಮಾಜಿ ಅಧ್ಯಕ್ಷ ದೇವದಾಸ ಕಾಮತ, ಎಸ್.ಪಿ. ಸಂಶಿಮಠಗೆ 'ಜೀವಮಾನ ಸಾಧನೆ' ಪ್ರಶಸ್ತಿ ನೀಡಲಾಗುವುದು. ಬಸವರಾಜ ಪುರ್ತಗೇರಿ, ಲಿಂಗಬಸಯ್ಯ ಮಠದ, ವೀರಣ್ಣ ಬೇವಿನಮರದಗೆ 'ಶ್ರೇಷ್ಠ ಉದ್ಯಮಿ' ಪ್ರಶಸ್ತಿ, ಭೂಷಣ ಶಹಾ, ಗವಿಸಿದ್ದಪ್ಪ ಪಲ್ಲೇದ, ಬಸವರಾಜ ಹುಡೇದ ಹಾಗೂ ಸೋಮಶೇಖರ ನರೋಣಿಗೆ ಶ್ರೇಷ್ಠ ವರ್ತಕ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದರು. ಸೆ.11 ರಂದು ಸಾಯಂಕಾಲ 4ಕ್ಕೆ ಮಹಿಳಾ ಘಟಕದಿಂದ 'ಉದ್ಯಮಶೀಲತೆ' ಕುರಿತು ಸಂವಾದ ಕಾರ್ಯಕ್ರಮ ನಡೆಯಲಿದೆ. ಸಾಯಂಕಾಲ 5ಕ್ಕೆ '2020-2025'ರ ಕೈಗಾರಿಕಾ ನೀತಿ ಕುರಿತು ನಡೆಯುವ ವಿಚಾರ ಸಂಕಿರಣದಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಶಿವಪುತ್ರ ಹರಿಜನ ಉಪನ್ಯಾಸ ನೀಡುವರು. ಸೆ.13 ರಂದು ಸಾಯಂಕಾಲ 6ಕ್ಕೆ ಶ್ರೇಷ್ಠ ಮಳಿಗೆ ಪ್ರಶಸ್ತಿ ಪ್ರದಾನ ಹಾಗೂ ಸಮಾರೋಪ ನಡೆಯಲಿದೆ. ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್., ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ ನಿಯೋಜಿತ ಅಧ್ಯಕ್ಷ ರಮೇಶಚಂದ್ರ ಲಹೋಟಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್. ನೇಮಗೌಡ, ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಶಿವಪುತ್ರ ಹರಿಜನ, ಜಿಪಂ ಗ್ರಾಕೈ ಉಪನಿರ್ದೇಶಕ ಎಚ್.ಬಿ. ಪಾಟೀಲ, ಜಿಲ್ಲಾ ನೋಡಲ್ ಅಧಿಕಾರಿ ಬಿ.ಮಹೇಶ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಹಿರೇಮಠ ಆಗಮಿಸುವರು ಎಂದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆ ಅಧ್ಯಕ್ಷ ಮದುಸೂಧನ ಪುಣೇಕರ, ಸದಾಶಿವಯ್ಯ ಮದರಿಮಠ, ಈಶ್ವರಪ್ಪ ಮುನವಳ್ಳಿ, ತಾತನಗೌಡ ಪಾಟೀಲ, ವೀರೇಶ ಕೂಗು, ಶರಣಬಸಪ್ಪ ಗುಡಿಮನಿ, ಪ್ರಕಾಶ ಉಗಲಾಟದ, ರಾಜಣ್ಣ ಮಲ್ಲಾಡದ, ಜಯದೇವ ಮೆಣಸಗಿ ಇದ್ದರು.




### 25 ಸಾವಿರ ಜನರ ನಿರೀಕ್ಷೆ

ಗದಗ ಉತ್ಸವದಲ್ಲಿ ರಾಮನಗರ, ಮೈಸೂರು, ಚೆನ್ನಪಟ್ಟಣ, ಚಿಕ್ಕಮಗಳೂರು ಸೇರಿ ಹಲವು ಜಿಲ್ಲೆಗಳ ಉತ್ಪನ್ನಗಳು ಪ್ರದರ್ಶನ ಹಾಗೂ ಮಾರಾಟಕ್ಕೆ ಸಿಗಲಿವೆ. ಉತ್ಸವದಲ್ಲಿ ಅಂದಾಜು 25 ಸಾವಿರ ಜನ ಬರುವ ನಿರೀಕ್ಷೆ ಇದೆ. ಇದರೊಂದಿಗೆ ಸ್ಥಳೀಯ ಕಲಾವಿದರನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಪ್ರತಿದಿನ ಆಹ್ವಾನಿತ ಕಲಾವಿರ ಜೊತೆ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿದೆ.

### 86 ಮಳಿಗೆ ನಿರ್ಮಾಣ

ಕೈಗಾರಿಕಾ ವಸ್ತು ಪ್ರದರ್ಶನದಲ್ಲಿ ಗುಡಿ ಹಾಗೂ ಮಧ್ಯಮ ಕೈಗಾರಿಕೆ ಉತ್ಪನ್ನಗಳಿಗೆ ವೇದಿಕೆ ಹಾಗೂ ಪರಿಚಯಿಸಲು ಈ ಉತ್ಸವ ಆಯೋಜಿಸಲಾಗಿದೆ. ಈ ಬಾರಿ 86 ಮಳಿಗೆ ನಿರ್ಮಿಸಲಾಗಿದೆ. ಇದರಲ್ಲಿ ಶೇ.50 ರಷ್ಟು ಗುಡಿ ಕೈಗಾರಿಕೆ ಮಳಿಗೆಗಳಿಗೆ ಉಚಿತವಾಗಿ ನೀಡಲಾಗುವುದು. ಉಳಿದವುಗಳನ್ನು ಇತರೆ ಕೈಗಾರಿಕೆಗಳ ಉತ್ಪನ್ನಗಳಿಗೆ ಬಾಡಿಗೆ ದರದಲ್ಲಿ ನೀಡಲಾಗುತ್ತದೆ.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka